ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.
1,10,000+
Digital E-PAPER READERS

No.1 HAMPI TIMES LEADING VIJAYANAGARA District News Paper
Contact for Advertisements: 9448633038



ಸಂಪುಟ:02 Volume:02 • ಸಂಚಿಕೆ: 213 Issue: 213 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 26.02.2025 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2







# ಐತಿಹಾಸಿಕ ಶಿವಲಿಂಗಕ್ಕೆ ಸೂರ್ಯರಶ್ಮಿ ಸ್ಪರ್ಶ

# ಶಿವನ ತೊಡೆಯಮೇಲೆ ಪಾರ್ವತಿ ಅಪರೂಪದ ದೇಗುಲ

### ಹೊಸಪೇಟೆ ತಾಲೂಕಿನ ಧರ್ಮದಗುಡ್ಡದ ಬಳಿಯಿರುವ ಓಬಳೇಶ್ವರನಿಗೆ ಸೂರ್ಯರಶ್ಮಿ | ಗುಡೇಕೋಟೆಯಲ್ಲಿ ಶಿವಪಾರ್ವತಿ ದೇಗುಲ

■ **ಹಂಪಿ ಟೈಮ್ಸ್ ಹೊಸಪೇಟೆ**


ತಾಲೂಕಿನ ನಾಗೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಧರ್ಮದಗುಡ್ಡದ ಬಳಿ ಇರುವ ಐತಿಹಾಸಿಕ ಶ್ರೀ ಓಬಳೇಶ್ವರ ದೇವಾಲಯದಲ್ಲಿನ ವಿಶೇಷ ಹಾಗೂ ಆಕರ್ಷಕ ಶಿವಲಿಂಗಕ್ಕೆ ನಿತ್ಯ ಸೂರ್ಯನ ಕಿರಣಗಳು ಸ್ಪರ್ಶಿಸುತ್ತವೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಮಹಾಶಿವರಾತ್ರಿ ಮುನ್ನದಿನ ಸೂರ್ಯರಶ್ಮಿಗಳು ಶಿವಲಿಂಗಕ್ಕೆ ತಾಗುವುದು ಕಣ್ಣಾರೆ ಕಂಡ ಭಕ್ತರು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ. ಶಿವನಿಗೆ ಸೂರ್ಯಕಿರೀಟದಂತೆ ಪ್ರಕಾಶಮಾನವಾಗಿರುವ ಈ ಚಿತ್ರ ಭಕ್ತರಲ್ಲಿ ಮತ್ತಷ್ಟು ಭಕ್ತಿಯನ್ನು ಹೆಚ್ಚಿಸಿದೆ. ಈ ದೇಗುಲ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ಶಕ್ತಿಕೇಂದ್ರವೆಂಬುದು ಭಕ್ತರ ಅಭಿಮತವಾಗಿದೆ.

ದಶಕಗಳ ಕೆಳಗೆ ಈ ದೇಗುಲ ನಿಧಿಗಳ್ಳರ ಹಾವಳಿಗೆ ತುತ್ತಾಗಿತ್ತು. ದೇವಸ್ಥಾನದ ಪ್ರವೇಶಕ್ಕೂ ನಿರ್ಬಂಧಿಸಿ ಕೆಲವರು ಜಾಲಿ ಮುಳ್ಳುಗಳಿಂದ ಮುಚ್ಚಲ್ಪಟ್ಟಿದ್ದರು. ದೇಗುಲ ಜೀರ್ಣೋದ್ಧಾರ ಬಗ್ಗೆ ಪತ್ರಿಕೆಯಲ್ಲಿ ವರದಿ ಪ್ರಕಟಿಸುತ್ತಾ ಬರಲಾಗಿದೆ. ಇತ್ತೀಚೆಗೆ ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಸಂಬಂಧಿಸಿದ ಅಧಿಕಾರಿಗಳನ್ನು ದೇಗುಲಕ್ಕೆ ಕಳುಹಿಸಿ ಪರಿಶೀಲನೆ ಮಾಡಿಸಿ, ವರದಿ ಪಡೆದಿದ್ದಾರೆ. ಜೀರ್ಣೋದ್ಧಾರ ಕುರಿತು ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ಕ್ರಮವಹಿಸಲು ಸೂಚಿಸಿದ್ದಾರೆ. ಭಕ್ತರ ಬೇಡಿಕೆಯಂತೆ ಶೀಘ್ರ ದೇಗುಲ ಜೀರ್ಣೋದ್ಧಾರ ಕಾಣಬೇಕಿದೆ.

ಮಹಾಶಿವರಾತ್ರಿ ನಿಮಿತ್ತ ನಾಗೇನಹಳ್ಳಿ ಯುವಕರ ತಂಡ ದೇಗುಲವನ್ನು ಸ್ವಚ್ಛಗೊಳಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಪ್ರತಿ ವರ್ಷ ಶಿವರಾತ್ರಿಯಿಂದ ಓಬಳೇಶ್ವರನಿಗೆ ವಿಶೇಷ ಅಭಿಷೇಕ, ಜಾಗರಣೆ ಮಾಡಲಾಗುತ್ತಿದೆ. ಹೊಸಪೇಟೆ ತಾಲೂಕು ಸೇರಿದಂತೆ ವಿವಿಧೆಡೆಗಳಿಂದ ಭಕ್ತರು ಆಗಮಿಸಿ ಶಿವನ ದರ್ಶನ ಪಡೆಯುತ್ತಾರೆ.

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಗುಡೇಕೋಟೆ ಗ್ರಾಮದಲ್ಲಿ ಅಪರೂಪದ ಶಿವಪಾರ್ವತಿ ದೇಗುಲವಿದೆ. ಶಿವನು ತನ್ನ ತೊಡೆಯ ಮೇಲೆ ಪಾರ್ವತಿಯನ್ನು ಕೂಡಿಸಿಕೊಂಡಿರುವ ಮನಸೂರೆಗೊಳ್ಳುವ ಏಕಶಿಲೆಯ ವಿಗ್ರಹ ವಿಜಯನಗರದ ಜಿಲ್ಲೆಯಲ್ಲಿರುವುದು ನಮ್ಮ ಭಾಗ್ಯ ಎಂದು ಗ್ರಾಮದ ಪಿ.ರಾಜಶೇಖರ ಹೇಳುತ್ತಾರೆ. ಜಿಲ್ಲೆಯಲ್ಲಿ ಐತಿಹಾಸಿಕ ವಿಶೇಷ ದೇಗುಲಗಳಿದ್ದರೂ, ಆದಾಯ ತರುವ ದೇಗುಲಗಳಿಗೆ ನೀಡಿದಷ್ಟು ಆಸಕ್ತಿ ಇನ್ನುಳಿದ ದೇಗುಲಗಳತ್ತ ಮುಜುರಾಯಿ ಇಲಾಖೆ ಅಧಿಕಾರಿಗಳು ಕಣ್ಣಾಯಿಸದೇ ನಿರ್ಲಕ್ಷ್ಯವಹಿಸುತ್ತಿರುವುದಕ್ಕೆ ಭಕ್ತರಲ್ಲಿ ಬೇಸರ ಮೂಡಿಸಿದೆ. ಇನ್ನಾದರೂ ಜಿಲ್ಲೆಯ ದೇಗುಲಗಳ ವೈಶಿಷ್ಟ್ಯತೆಗಳ ಕುರಿತ ಇಲಾಖೆ ಬೆಳಕು ಚೆಲ್ಲಲಿ ಎಂಬುದು ಭಕ್ತರ ಒತ್ತಾಯವಾಗಿದೆ.




ಕೂಡ್ಲಿಗಿ ತಾಲೂಕಿನ ಗುಡೇಕೋಟೆ ಗ್ರಾಮದಲ್ಲಿರುವ ಅಪರೂಪದ ಶಿವಪಾರ್ವತಿ ದೇವಸ್ಥಾನ | ಹೊಸಪೇಟೆ ತಾಲೂಕಿನ ನಾಗೇನಹಳ್ಳಿ ಸಮೀಪದ ಓಬಳೇಶ್ವರ ದೇಗುಲದಲ್ಲಿರುವ ಶಿವಲಿಂಗ

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


Call Us for Advertisements
Good Opportunity for Branding
ಹಂಪಿ ಉತ್ಸವಕ್ಕೆ
ನೀವೂ ಸ್ವಾಗತ ಕೋರಲು ಬಯಸುತ್ತೀರಾ
ಇಂದೇ ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


## ಮೈಕ್ರೋ ನ್ಯೂಸ್

## ಇಂದು ಹಂಪಿಯಲ್ಲಿ ಕನ್ನಡ ಭಾಗೀರಥಿಗೆ ತುಂಗಾರತಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿಯಲ್ಲಿ ಹರಿಯುವ ತುಂಗಭದ್ರ ನದಿ ಮಹೋನ್ನತ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಇಂಬಾಗಿತ್ತು. ವಿದ್ಯಾರಣ್ಯರು ತುಂಗಭದ್ರ ಪರವಹಿಸುವ ಸ್ಥಳದಲ್ಲೇ ರಾಜ್ಯಭಾರ ಆರಂಭಿಸುವಂತೆ ಹಕ್ಕಬುಕ್ಕರಿಗೆ ಮಾರ್ಗದರ್ಶನ ನೀಡಿದರು. ತುಂಗಾ ಪಾನ, ಗಂಗಾ ಸ್ನಾನ, ಎಂಬ ನಾಣ್ಣುಡಿ ಜನಮಾನಸದಲ್ಲಿ ಇಂದಿಗೂ ಹಸಿರಾಗಿದೆ. ಕನ್ನಡ ನಾಡಿನ ಭಾಗೀರಥಿ ಎನಿಸಿದ ತುಂಗಾಭದ್ರ ನದಿಗೆ ಹಂಪಿ ಉತ್ಸವ–2025ರ ಹಿನ್ನಲೆಯಲ್ಲಿ ಫೆ.26 ಬುಧವಾರ ಸಂಜೆ 6 ಗಂಟೆಗೆ ತುಂಗಾರತಿ ಕಾರ್ಯಕ್ರಮವಿರುತ್ತದೆ. ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನದ ಹತ್ತಿರದ ತುಂಗಭದ್ರಾ ನದಿ ತಟದಲ್ಲಿ ಜರುಗುವ ತುಂಗಾರತಿ ಕಾರ್ಯಕ್ರಮದಲ್ಲಿ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಭಾಗವಹಿಸಿ, ತುಂಗಾರತಿ ನೆರವೇರಿಸುವರು.. ಇವರೊಂದಿಗೆ ಶಾಸಕ ಹೆಚ್.ಆರ್.ಗವಿಯಪ್ಪ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿ.ಪಂ.ಸಿಇಓ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ಸೇರಿಂದತೆ ಇತರೆ ಜನಪ್ರನಿಧಿಗಳು, ಸ್ಥಳೀಯ ಸಂಸ್ಥೆ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ತುಂಗಾರತಿ ಮೂಲಕ ಹಂಪಿ ಉತ್ಸವ–2025ರ ಯಶಸ್ವಿಯ ಕೈಗೊಳ್ಳುವ ಪ್ರಾರ್ಥನೆ ಇದಾಗಿದೆ.


ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಪ್ರಿಂಟ್ & ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವೆಬ್‌ಸೈಟ್‌ಗೆ ಭೇಟಿ ನೀಡಿ..
www.hampitimes.com
epaper.hampitimes.com


### ಹೆಪಟೈಟಿಸ್ ಸಿ ರೋಗಿಗಳ ಡಯಾಲಿಸಿಸ್ ಘಟಕ ಉದ್ಘಾಟನೆ | ಸೌಲಭ್ಯ ಪಡೆಯಿರಿ ಎಂದ ಶಾಸಕ ಹೆಚ್.ಆರ್.ಗವಿಯಪ್ಪ

# ಡಯಾಲಿಸಿಸ್ ಘಟಕ ವರದಾನ

### 6 ಡಯಾಲಿಸ್ ಯಂತ್ರಗಳಲ್ಲಿ 1 ಯಂತ್ರವನ್ನು ಹೆಪಟೈಟಿಸ್ ಸಿ ರೋಗಿಗಳ ಡಯಾ ಲಿಸಿಸ್‌ಗಾಗಿ ಮೀಸಲು




■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರದ 100 ಹಾಸಿಗೆಗಳ ಸರ್ಕಾರಿ ಆಸ್ಪತ್ರೆಯಲ್ಲಿ ಹೆಪಟೈಟಿಸ್ ಸಿ ರೋಗಿಗಳ ಡಯಾಲಿಸಿಸ್ ಘಟಕ ಆರಂಭಿಸಲಾಗಿದ್ದು, ಘಟಕವು ರೋಗಿ ಗಳಿಗೆ ವರದಾನವಾಗಲಿದೆ. ಇದರ ಸದುಪಯೋಗ ಪಡೆಯುವಂತೆ ಶಾಸಕ ಹೆಚ್.ಆರ್.ಗವಿಯಪ್ಪ ಕರೆ ನೀಡಿದರು.

ಮಂಗಳವಾರ ನಗರ ಸರ್ಕಾರಿ ಆಸ್ಪತ್ರೆಯಲ್ಲಿ ಸ್ಥಾಪಿಸಲಾಗಿರುವ ಹೆಪಟೈಟಿಸ್ ಸಿ ರೋಗಿಗಳ ಡಯಾಲಿಸಿಸ್ ಘಟಕ, ಸ್ನೇಹಾ ಕ್ಲಿನಿಕ್ ಹಾಗೂ ಪೌಷ್ಠಿಕ ಪುನರ್ ವಸತಿ ಕೇಂದ್ರಗಳನ್ನು ಉದ್ಘಾಟಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಒಟ್ಟು 19 ಹೆಪಟೈಟಿಸ್ ಬಿ ಹಾಗೂ ಸಿ ರೋಗಿಗಳು ಡಯಾಲಿಸಿಸ್ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸರ್ಕಾರಿ ಆಸ್ಪತ್ರೆಯಲ್ಲಿ ಇವರಿಗಾಗಿ ಪ್ರತ್ಯೇಕ ಡಯಾಲಿಸಿಸ್ ಘಟಕ ಇರದ ಕಾರಣ ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲಾಸ್ಪತ್ರೆಗಳಿಗೆ ಕಳುಹಿಸ ಕೊಡಲಾಗುತ್ತಿತ್ತು. ಸದ್ಯ ನಗರದ ಸರ್ಕಾರಿ ಆಸ್ಪತ್ರೆಯಲ್ಲಿರುವ 6 ಡಯಾಲಿಸ್ ಯಂತ್ರಗಳಲ್ಲಿ 1 ಯಂತ್ರವನ್ನು ಹೆಪಟೈಟಿಸ್ ಸಿ ರೋಗಿಗಳ ಡಯಾಲಿಸಿಸ್‌ಗಾಗಿ ಮೀಸಲು ಇರಿಸಲಾಗಿದೆ. ಉಳಿದ 5 ಡಯಾಲಿಸಿಸ್ ಯಂತ್ರಗಳ ಪೈಕಿ ಒಂದು ಯಂತ್ರ ತಾಂತ್ರಿಕ ಕಾರಣದಿಂದ ಸ್ಥಗಿತಗೊಂಡಿದೆ. 4 ಡಯಾಲಿಸಿಸ್ ಯಂತ್ರಗಳಲ್ಲಿ ಒಟ್ಟು 25 ಸಾಮಾನ್ಯ ರೋಗಿಗಳು ಡಯಾಲಿಸಿಸ್ ಚಿಕಿತ್ಸೆ ಪಡೆಯುತ್ತಿದ್ದಾರೆ. ದಿನ ಒಂದಕ್ಕೆ 3 ಸೈಕಲ್‌ಗಳಲ್ಲಿ ಡಯಾಲಿಸಿಸ್ ನಡೆಸಲಾಗುತ್ತಿದೆ. ತಿಂಗಳಿಗೆ 280 ಹೆಚ್ಚು ಸೈಕಲ್‌ಗಳಲ್ಲಿ ಡಯಾಲಿಸ್ ನಡೆಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಹೆಪಟೈಟಿಸ್ ಬಿ ರೋಗಿಗಳಿಗೂ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಡಯಾಲಿಸಿಸ್ ಸೌಲಭ್ಯ ನೀಡಲಾಗುವುದು. 10 ರಿಂದ 19 ವಯೋಮಾನದ ಹದಿಹರೆಯದವರಲ್ಲಿ ಕಂಡುಬರುವ ಆರೋಗ್ಯ ಹಾಗೂ ಮಾನಸಿಕ ಸಮಸ್ಯೆಗಳ ಪರಿಹಾರಕ್ಕಾಗಿ ಆಪ್ತ ಸಮಾಲೋಚನೆ ನೀಡಲು ಸ್ನೇಹಾ ಕ್ಲಿನಿಕ್ ಸಹ ಆಸ್ಪತ್ರೆಯಲ್ಲಿ ತೆರೆಯಲಾಗಿದೆ. ಇದರೊಂದಿಗೆ ತೀವ್ರ ತರನಾದ ಅಪೌಷ್ಠಿಕತೆ ಹೊಂದಿರುವ ಶಿಶು ಹಾಗೂ ಮಕ್ಕಳ ಹಾರೈಕೆಗಾಗಿ ಪೌಷ್ಠಿಕಾಂಶ ಪುನರ್ವಸತಿ ಕೇಂದ್ರವನ್ನು ಸಹ ತೆರೆಯಲಾಗಿದೆ ಎಂದು ಶಾಸಕ ಹೆಚ್.ಆರ್.ಗವಿಯಪ್ಪ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಶಂಕರ್‌ನಾಯ್ಕ್, ಜಿಲ್ಲಾ ಆರ್‌ಸಿಎಚ್ ಡಾ. ಬಿ.ಜಂಬಯ್ಯ, ಆಡಳಿತ ವೈದ್ಯಾಧಿಕಾರಿ ಡಾ.ಹರಿಪ್ರಸಾದ್ ಸೇರಿದಂತೆ ಆಸ್ಪತ್ರೆಯ ವೈದ್ಯಾಧಿಕಾರಿಗಳು, ಸಿಬ್ಬಂದಿ, ಮಕ್ಕಳು ಇದ್ದರು.

## ಮಾ.3 ಕೆ.ಕೆ.ಎಸ್.ಆರ್.ಟಿ.ಸಿ. ಫೋನ್ ಇನ್ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**

ಮಾರ್ಚ್ 3 ರಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ(ಕೆ.ಕೆ.ಎಸ್.ಆರ್.ಟಿ.ಸಿ) ಹೊಸಪೇಟೆ ವಿಭಾಗದಿಂದ ಸಮರ್ಪಕ ಬಸ್ ಸಂಚಾರ ಕುರಿತು ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು,ಪ್ರಯಾಣಿಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಸಾರಿಗೆ ಬಸ್‌ಗಳ ಸಂಚಾರದಲ್ಲಿ ಉಂಟಾಗುತ್ತಿರುವ ಕುಂದು ಕೊರತೆ ಹಾಗೂ ಸಮಸ್ಯೆಗಳ ಕುರಿತು, ಮಾರ್ಚ್ 3 ರಂದು ಮಧ್ಯಾಹ್ನ 3:30 ರಿಂದ 4:30 ವರೆಗೆ ದೂರವಾಣಿ ಸಂಖ್ಯೆಗಳಾದ 7760992314,7760992317 ಗೆ ಕರೆ ಮಾಡಿ ಸಮಸ್ಯೆಗಳನ್ನು ತಿಳಿಸಬಹುದು. ಈ ಸಮಸ್ಯೆಗಳಿಗೆ ಸ್ಪಂದಿಸಿ ಸೂಕ್ತ ಪರಿಹಾರ ದೊರಕಿಸಿ ಕೊಡುವುದಾಗಿ ಹೊಸಪೇಟೆ ವಿಭಾಗದ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

## ಚಿರತೆ ದಾಳಿ, ಆಕಳ ಕರು ಸಾವು

■ **ಹಂಪಿ ಟೈಮ್ಸ್ ಕೂಡ್ಲಿಗಿ**

ಕಣದಲ್ಲಿ ಕಟ್ಟಿದ್ದ ಆಕಳ ಕರುವಿನ ಮೇಲೆ ಚಿರತೆ ದಾಳಿ ಮಾಡಿ ಕೊಂದ ಹಾಕಿರುವ ಘಟನೆ ತಾಲ್ಲೂಕಿನ ಸಿಡೇಗಲ್ಲು ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ.

ಗ್ರಾಮದ ಕೃಷ್ಣಮೂರ್ತಿ ಅವರಿಗೆ ಸೇರಿದ ಆಕಳ ಕರುವನ್ನು ಕಣದಲ್ಲಿ ಕಟ್ಟಿದ್ದರು. ಈ ವೇಳ ಚಿರತೆ ದಾಳಿ ಮಾಡಿ ಕೊಂದು ಹಾಕಿದೆ. ಸ್ಥಳಕ್ಕೆ ಆರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಪಶು ಸಂಗೋಪನ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ.


ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ನಿಮ್ಮ ಕೈಗೆಟುಕುವ ದರದಲ್ಲಿ ಜಾಹೀರಾತುಗಳು...
ಹಂಪಿ ಟೈಮ್ಸ್ ಇ-ಪೇಪರ್
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

## ಸ್ಟುಡೆಂಟ್ ಕಾಲಂ

# ಶ್ರಮ ಪಟ್ಟರೆ ಫಲ ಉಂಟು



ರಂಗಪುರ ಎಂಬ ಊರಿನಲ್ಲಿ ಮೂಕಜ್ಜಿ ತನ್ನ ಮೊಮ್ಮಗ ಪೆದ್ದಣ್ಣನ ಜೊತೆಗೆ ಜೀವನ ಸಾಗಿಸುತ್ತಿದ್ದಳು ತಂದೆ ತಾಯಿಯನ್ನು ಬಾಲ್ಯದಲ್ಲೇ ಕಳೆದುಕೊಂಡಿದ್ದ

ಪೆದ್ದಣ್ಣ ನನ್ನ ಅಜ್ಜಿಯೊಂದಿಗೆ ಬೆಳೆಯ ತೊಡಗಿದನು ಪೆದ್ದಣ್ಣನಿಗೆ ಓದುಬರಹ ತಲೆಗೆ ಹತ್ತಲಿಲ್ಲ ಪೋಲಿಯಾಗಿ ಅಲೆಯುತ್ತಾ ಉಡಾಳ ಗುಂಡ ನಾಗಿ ಬೆಳೆದ ಹೀಗಾಗಿ ಮೂಕಜ್ಜಿಗೆ ಆತನ ಮುಂದಿನ ಭವಿಷ್ಯದ ಬಗ್ಗೆ ತುಂಬಾ ಚಿಂತೆ ಆಯ್ತು, ಬೆವರಿನ ಬೆಲೆಯೂ ಅರಿಯದೆ ದುಡ್ಡಿನ ಮಹತ್ವವನ್ನರಿಯದೆ ಉಂಬನಂತೆ ಕಾಲ ಕಳೆಯುತ್ತಿದ್ದ ಸ್ವಲ್ಪ ಮೂಕಜ್ಜಿಗೆ ಸ್ವಲ್ಪ ಜಮೀನು ಇತ್ತು ಅದರ ಆದಾಯದಿಂದ ಎರಡು ಒತ್ತು ಊಟ ದಕ್ಕುತಿತ್ತು ಅಜ್ಜಿಗೂ ವಯಸ್ಸಾಯಿತು ದುಡಿಯುವ ಶಕ್ತಿ ಶಿಕ್ಷಣಿಸುತ್ತಿತ್ತು ಅನಾರೋಗ್ಯದಿಂದ ಹಾಸಿಗೆ ಹಿಡಿದಳು ಅಜ್ಜಿ ಇನ್ನೇನು ಹೆಚ್ಚು ದಿನ ಬಾಳುವುದಿಲ್ಲವೆಂಬ ಸತ್ಯವನ್ನರಿತು ಅಜ್ಜಿ ಮೊಮ್ಮಗನನ್ನು ಕರೆದು ಪೆದ್ದಣ್ಣ ನಮ್ಮ ಜಮೀನಿನಲ್ಲಿ ಚಿನ್ನದ ನಾಣ್ಯಗಳು ತುಂಬಿದ ಬಿಂದಿಗೆ ಇದೆ ಅದನ್ನು ನೀನು ತೆಗೆದುಕೋ ಎಂದು ಹೇಳಿ ಅಜ್ಜಿ ಹಸು ನೀಗಿದಳು. ಅಜ್ಜಿಯ ಶ್ರದ್ಧಾ ಕಾರ್ಯಗಳೆಲ್ಲ ಮುಗಿದ ಮೇಲೆ ಪೆದ್ದಣ್ಣನಿಗೆ ಅಜ್ಜಿ ಹೇಳಿದ ಚಿನ್ನದ ನಾಣ್ಯಗಳಿರುವ ನಿಧಿಯನ್ನು ಪಡೆಯುವ ಆಸೆ ಆಯಿತು. ಆರೆ ಗುದ್ದಲಿಗಳೊಂದಿಗೆ ಜಮೀನಿಗೆ ಹೋದ ಆದರೆ ನಿಧಿ ಹೂತ್ತಿಟ್ಟಿರುವ ಜಾಗ ನಿಖರವಾಗಿ ತಿಳಿಯದ ಕಾರಣ ಜಮೀನಿನೆಲ್ಲಾ ಅಗೆದು ಅಗೆದು ಸುಸ್ತಾದ, ನಿಧಿ ದೊರಕದೆ ನಿರಾಶನಾದ. ಅಜ್ಜಿ ಸುಳ್ಳು ಹೇಳಿದ್ದಾಳೆಂದು ಮನದಲ್ಲೇ ಶಪಿಸಿದ ಆದರೆ ಈ ವಿಷಯ ಊರಿನ ಹಿರಿಯರಲ್ಲಿ ಹೇಳಿದಾಗ ಅವರಿಗೆ ಅಜ್ಜಿಯ ಮಾತಿನ ಮರ್ಮದಾ ಅರಿವಾಯಿತು. ಇಲ್ಲಿ ಕೇಳು ಪೆದ್ದಣ್ಣ ಹೇಗೋ ಜಮೀನನ್ನೆಲ್ಲ ಅಗೆದು



ಅಗೆದು ಹದ ಗೊಳಿಸಿದ್ದೀಯಾ ಹಾಗೆ ಉತ್ತಮ ಬೀಜಾ ರಸಗೊಬ್ಬರ ಹಾಕು ಚೆನ್ನಾಗಿ ಬೆಳೆಯನ್ನು ಬೆಳೆ ಎಂದು ಸಲಹೆ ನೀಡಿದರು. ಪೆದ್ದಣ್ಣ ಹಿರಿಯರು ಹೇಳಿದ ಹಾಗೆ ಮಾಡಿದ ಸಕಾಲಕ್ಕೆ ಮಳೆ ಬಂತು ಚೆನ್ನಾಗಿ ಫಸಲು ಬಂತು. ಫಸಲನ್ನು ಮಾರಿದಾಗ ಕೈ ತುಂಬಾ ಹಣ ಬಂತು 'ಶ್ರಮ ಪಟ್ಟರೆ ಫಲ ಉಂಟು' ಎಂಬ ಸತ್ಯವನ್ನು ಅರಿತು ಮುಂದೆ ಋತುಮಾನಕ್ಕನುಗುಣವಾಗಿ ಬೆಳೆಗಳನ್ನು ಬೆಳೆದು ಉತ್ತಮ ಪ್ರಗತಿಪರ ಕೃಷಿಕನಾದ. ಬಸವಣ್ಣನವರು ಹೇಳಿದ ಹಾಗೆ ಕಾಯಕವೇ ಕೈಲಾಸ ಎಂಬಂತೆ ಪೆದ್ದಣ್ಣ ದುಡಿದು ಜಾಣನಾದ ಶ್ರೀಮಂತನಾದ, ಸಮಾಜದಲ್ಲಿ ಇತರರಂತೆ ಬಾಳಿ ತೋರಿಸಿದ. ಅದರಂತೆ ಎಲ್ಲಾ ವಿದ್ಯಾರ್ಥಿಗಳು ಕಾಫಿ ಚೀಟಿ ಮೇಲೆ ಅವಲಂಬಿತರಾಗದೆ, ಪ್ರಾರಂಭದ ದಿನಗಳಿಂದಲೇ ಕಷ್ಟಪಟ್ಟು ಓದುತ್ತಾ ಬಂದರೆ ಖಂಡಿತ ಯಶಸ್ಸು ನಮ್ಮದಾಗುತ್ತದೆ.

– ಯು.ಸಿಂಧೂ, 9ನೇ ತರಗತಿ
ಸರ್ಕಾರಿ ಪ್ರೌಢಶಾಲೆ ಬ್ಯಾಸಿಗಿದೇರಿ, ಹಗರಿಬೊಮ್ಮನಹಳ್ಳಿ ತಾಲೂಕು

## ನಿಮ್ಮ ಮಕ್ಕಳು ಅರಸರಾಗಬೇಕೆ?

ಕನ್ನಡ ದಿನಪತ್ರಿಕೆ, ಪುಸ್ತಕಗಳನ್ನು ಮಕ್ಕಳ ಕೈಯಲ್ಲಿಡಿ. ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಜಗತ್ ಸರ್ವಂ... ಶಿವಮಯಂ!



ಶಿವ ಆಗಮ್ಯ, ಅಗೋಚರ, ಅನಂತ,ಅನಾದಿ ಶಿವನನ್ನು ಅರ್ಥಮಾಡಿಕೊಳ್ಳದ ಪಾಮರರಿಗೆ ಆತ ಕೇವಲ ಲಿಂಗ ರೂಪಿ ಎಂದು ತೋರಿದರೆ ಮತ್ತೆ ಕೆಲವರಿಗೆ ಆತ ಅರೆ ನಗ್ನ, ಬೂದಿ ಬಡಿದುಕೊಂಡಿರುವ ಸ್ಮಶಾನವಾಸಿ. ಹುಲಿಯ ಚರ್ಮವನ್ನು ಅಂಗವಸ್ತವನ್ನಾಗಿ ಧರಿಸಿದ ಶಿವ ನಾಗರಹಾವನ್ನು ಕೊರಳಲ್ಲಿ ಧರಿಸಿದಾತ. ಶಿರದಲ್ಲಿ ಗಂಗೆಯನ್ನು ಹೊಂದಿರುವ ಆತ ಚಂದ್ರನನ್ನು ಕೂಡ ತನ್ನ ಶಿರೋಭರಣವನ್ನಾಗಿ ಧರಿಸಿದಾತ. ಇದು ಆತನ ಬಾಹ್ಯ ರೂಪವಾದರೆ ಅಂತರಂಗದಲ್ಲಿ ಆತ ಸಕಲವೂ ಹೌದು. ಹಲವಾರು ವೈರುಧ್ಯಗಳ ಸಂಗಮವಾಗಿರುವ ಶಿವನನ್ನು ಅರ್ಥ ಮಾಡಿಕೊಳ್ಳಲು ಬಹಳಷ್ಟು ಬುದ್ಧಿ ಖರ್ಚು ಮಾಡಬೇಕಾಗಿಲ್ಲ. ಶಿವ ಅದಿಯೋಗಿ,ಭಕ್ತ ಪರಿಪಾಲಕ, ಅಭಿಷೇಕ ಪ್ರಿಯ, ಪಾರ್ವತಿ ಪತಿ ಹರ ಮಹಾದೇವ.

ನಮ್ಮ ಜನಪದರ ಪಾಲಿಗಂತು ಪಾರ್ವತಿ ದೇವಿ ಮನೆ ಮಗಳಾದರೆ ಶಿವ ಮನೆಯಳಿಯ. ಅವರ ಪ್ರೀತ್ಯಾದರ ಮತ್ತು ಭಕ್ತಿಯ ಭಗವಂತ ಈ ಮುಕ್ಕಣ್ಣ.

**ಶಿವ ಶಿವ ಎಂದರೆ ಸಿಡಿಲೆಲ್ಲ ಬಯಲಾಗಿ**
**ಕಲ್ಲು ಬಂದೆರಗಿ ಕಡೆಗಾಗಿ**
**ಎಲೆ ಮನವೇ ಶಿವನೆಂಬೊ ಶಬುದ ಬಿಡಬ್ಯಾಡ**

ಎಂಬ ಜನಪದರ ನುಡಿಯಂತೆ ಜನರು ತಮ್ಮ ಬದುಕಿನಲ್ಲಿ ನಡೆಯುವ ಎಲ್ಲಾ ವಿಷಯಗಳನ್ನು ಕೂಡ ಶಿವನ ಆಟವೇ ಎಂದು ಭಾವಿಸುತ್ತಾರೆ.

ದೇವ ದಾನವರು ಕ್ಷೀರಸಾಗರ ಮಂಥನವನ್ನು ಮಾಡಿದಾಗ ಉದ್ಭವವಾದ ವಿಷವನ್ನು ಶಿವ ಕುಡಿದನು. ಕೊರಳಲ್ಲಿ ಹಾಲಾಹಲವೇ ತುಂಬಿದ್ದರೂ ಅದನ್ನು ನುಂಗದೆ ಪತ್ನಿಯ ಅಭೀಪ್ಸೆಯಂತೆ ಜಗತ್ಕಲ್ಯಾಣಕ್ಕಾಗಿ ತನ್ನ ಗಂಟಲಲ್ಲಿಯೇ ಇರಿಸಿಕೊಂಡ ಶಿವ ನೀಲಕಂಠನೆನಿಸಿದ... ಆ ಮೂಲಕ ಬದುಕಿನಲ್ಲಿ ಬರುವ ಎಲ್ಲಾ ಕಷ್ಟ, ದುಃಖ, ನೋವುಗಳನ್ನು ಸಹಿಸಿ ಬಾಳಬೇಕು ಎಂಬ ಸಂದೇಶವನ್ನು ನೀಡಿದ. ಲೋಕದ ದುಃಖವನ್ನೆಲ್ಲ ನನಗಿರಲಿ ಎಂದು ಸರ್ವ ಜನರ ಹಿತವನ್ನು ಕಾಯ್ದವ ಶಿವ.... ನೀಲಕಂಠ, ವಿಷಕಂಠ, ಶ್ರೀಕಂಠ ಅವನೇ ನಮ್ಮ ನಂಜುಂಡೇಶ್ವರ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ವಾಸುಕಿ ಕಂಠಭರಣ... ತನ್ನ ಕೊರಳಲ್ಲಿ ಹಾವನ್ನು ಸುತ್ತಿಕೊಂಡಿರುವ ಶಿವನ ಕೊರಳಲ್ಲಿರುವ ಹಾವು ನಮ್ಮೆಲ್ಲ ಮನೋದೈಹಿಕ ವಾಂಛೆಗಳ ಪ್ರತೀಕ. ಕೊಂಚ ಏಮಾರಿದರೂ ನಮ್ಮನ್ನು ತನ್ನ ಹಿಡಿತದಲ್ಲಿ ಇನ್ನಿಲ್ಲದಂತೆ ಬಂಧಿಸುವ ಕಾರಣ ಸದಾ ಜಾಗೃತನಾಗಿರಬೇಕು ಎಂಬ ಪಾಠವನ್ನು ನಮಗೆ ಸದಾ ನೀಡುತ್ತಿರುವಾತ ನಾಗೇಶ. ಹಾವು ದ್ವೇಷ,ವೈಷಮ್ಯಗಳ ಸಂಕೇತವಾದರೂ ನಮ್ಮಲ್ಲಿ ಅಮೃತತ್ವ ಇರಬೇಕು ಎಂದು ಸಾರುವಾತ ಶಿವಶಂಕರ.

ಗಂಗಾಧರ ಗೌರಿ ಪ್ರಿಯ.... ಗಂಗೆಯನ್ನು ತನ್ನ ಜಟೆಯಲ್ಲಿ ಧರಿಸಿದಾತ. ಬದುಕಿನಲ್ಲಿ ಅದೆಷ್ಟೇ ಒತ್ತಡಗಳು ನಮ್ಮನ್ನು ಬಾಧಿಸಿದರೂ ತಲೆಯನ್ನು ತಣ್ಣಗೆ ಇಟ್ಟುಕೊಳ್ಳಬೇಕು ಎಂದು ಬೋಧಿಸಿದಾತ. ಗೌರಿಯನ್ನು ತೊಡೆಯ ಮೇಲೆ ಹೊತ್ತು ಇಡೀ ಕುಟುಂಬದ ಭಾರವನ್ನು, ಸ್ತ್ರೀ ಕುಲದ ರಕ್ಷಣೆಗೆ ಕಟಿಬದ್ಧನಾದವನು.

ತನ್ನ ದೇಹದ ಅರ್ಧ ಭಾಗವನ್ನೇ ಪತ್ನಿ ಗೌರಿಗೆ ನೀಡಿ ಅರ್ಧನಾರೀಶ್ವರನಾದ ಶಿವ... ಶಕ್ತಿ ಇಲ್ಲದೆ ಶಿವನಿಲ್ಲ ಶಿವನಿಲ್ಲದೆ ಶಕ್ತಿ ಇಲ್ಲ ಎಂದು ಸ್ತ್ರೀ ಪುರುಷ ಸಮಾನತೆಯನ್ನು ಸಾರಿದಾತ. ಅರ್ಧನಾರೀಶ್ವರ ತತ್ವದ ಮೂಲಕ ಈ ಜಗತ್ತಿನ ಏಳಿಗೆಗೆ, ಮನುಕುಲದ ಉದ್ಧಾರಕ್ಕೆ ಪುರುಷನಷ್ಟೇ ಹೆಣ್ಣು ಕೂಡ ಕಾರಣಳು ಎಂದು ಸಾರಿದಾತ. ಗಂಗೆ ಎಂದರೆ ನೀರು. ನೀರು ಶುದ್ಧತೆಯ ಸಂಕೇತ ನೀರಿಲ್ಲದೆ ಈ ಜಗತ್ತಿನ ಬದುಕಿಲ್ಲ ಆದ್ದರಿಂದ ನೀರಿನ ಪ್ರತಿರೂಪವಾದ ಗಂಗೆಯನ್ನು ತಲೆಯ ಮೇಲೆ ಹೊತ್ತು ಪೂಜಿಸಲು ಹೇಳಿದಾತ. ನಮ್ಮೆಲ್ಲಾ ಸಮಾಜ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪೂಜೆ ಪುನಸ್ಕಾರಗಳಲ್ಲಿ ಗಂಗಾ ಪೂಜೆಯೊಂದಿಗೆ ಎಲ್ಲ ಕಾರ್ಯಕ್ರಮಗಳು ಆರಂಭವಾಗುವುದು ಈ ಕಾರಣಕ್ಕಾಗಿಯೇ.

ವೃಷಭ ವಾಹನ.... ಕೃಷಿ ಪ್ರಧಾನವಾದ ನಮ್ಮ ಸಂಸ್ಕೃತಿಯಲ್ಲಿ ಎತ್ತುಗಳು ನಮ್ಮ ಜೀವನದ ಬಹುಮುಖ್ಯ ಸಂಗಾತಿಗಳು. ಸಾಂಘಿಕ ಜೀವನದ ಪರಿ ಕಲ್ಪನೆಯನ್ನು ಮೂಡಿಸುವ ಎತ್ತುಗಳು ಕೊರಳೆರಡಾದರೂ ಹೊರುವ ನೊಗ ಒಂದೇ ಎಂಬಂತೆ ಬದುಕು ಸಾಗಿಸುತ್ತವೆ, ಆದ್ದರಿಂದ ವೃಷಭ ವಾಹನ ಶಿವ ಈ ಜಗತ್ತು ಎಂಬ ಸಂಸಾರದ ಭಾರವನ್ನು ಪತ್ನಿ ಸಮೇತನಾಗಿ ತಾನು ಹೊತ್ತಿದ್ದು ಎತ್ತಿನಂತೆ ಪ್ರತಿಯೊಬ್ಬ ವ್ಯಕ್ತಿಯು ಕೂಡ ಕೌಟುಂಬಿಕ, ಸಾಮಾಜಿಕ ಮತ್ತು ಧಾರ್ಮಿಕ ಜವಾಬ್ದಾರಿ ಗಳನ್ನು ಹೊರಬೇಕೆಂಬ ಸಂದೇಶವನ್ನು ನೀಡುತ್ತಾನೆ.

ಇನ್ನು ನಮ್ಮ ಲೌಕಿಕರು ಮಾತಿನಲ್ಲಿ ಹೇಳುವಾಗ ಹೆಣ್ಣು ಮಕ್ಕಳ ಬುದ್ಧಿ ಮೊಣಕಾಲ ಕೆಳಗೆ, ಹೆಣ್ಣು ಮಕ್ಕಳ ತಲೆ ಮೇಲೆ ಕೂಡಿಸಿಕೊಳ್ಳಬಾರದು ಎಂಬ ಮಾತಿಗೆ ಅಪವಾದವಾಗಿ ಹೆಣ್ಣು ಮಕ್ಕಳ ಸ್ಥಾನ ಉನ್ನತವಾದದ್ದು ಎಂದು ತನ್ನ ಪತ್ನಿಯರನ್ನು ತಲೆಯ ಮೇಲೆ ಮತ್ತು ತೊಡೆಯ ಮೇಲೆ ಕೂರಿಸಿ ತೋರಿದಾತ. ಈ ಸೃಷ್ಟಿಯಲ್ಲಿ ಗಂಡು ಹೆಣ್ಣು ಎಂಬ ಬೇಧ ವಿರುವುದು ಅವರ ದೈಹಿಕ ರಚನೆಯಲ್ಲಿ ಮಾತ್ರ. ಪುರುಷ ಸೃಷ್ಟಿಗೆ ಕಾರಣವಾದರೆ ಈ ಇಡೀ ಸೃಷ್ಟಿಯ ಕರ್ತೃ ಹೆಣ್ಣು ಎಂದು ತೋರಿಸಿಕೊಟ್ಟು ಉಮಾ ಮಹೇಶ್ವರ, ಗೌರಿ ಶಂಕರ ಗಿರಿಜಾಪತಿ ಎಂದು ಕರೆಸಿಕೊಂಡಾತ.

ಗಜ ಚರ್ಮಾಂಬರಧಾರಿ... ಭಕ್ತ ಪ್ರಿಯನಾದ ಶಿವನು

ಮಹಿಷಾಸುರನ ಪುತ್ರನಾದ ಗಜಾಸುರನನ್ನು ಸಂಹರಿಸುವ ಮುನ್ನ ಪ್ರಾಯಶ್ಚಿತಕ್ಕೊಳಗಾದ ಗಜಾಸುರನ ಬೇಡಿಕೆಯಂತೆ ಆತನ ಚರ್ಮವನ್ನು ಧರಿಸಿದ ಎಂಬ ಶಿವಪುರಾಣದ ಹೇಳಿಕೆಯು ಶಿವನು ನಾವು ನಮ್ಮ ತಪ್ಪುಗಳನ್ನು ಅರಿತು ಕ್ಷಮೆ ಯಾಚಿಸಿದಾಗ ಭಕ್ತ ವತ್ಸಲನಾದ ಶಿವ ನಮ್ಮನ್ನು ಕ್ಷಮಿಸಿ ನಮ್ಮನ್ನು ಪೊರೆಯುತ್ತಾನೆ ಎಂಬ ಸಂದೇಶವನ್ನು ನೀಡುತ್ತಾನೆ. ಇನ್ನು ಆತ ಧರಿಸಿರುವ ಹುಲಿಯ ಚರ್ಮವು ಕೂಡ ಭಯ ಮುಕ್ತರಾಗಿರಬೇಕು ಎಂಬುದನ್ನು ಸೂಚಿಸುತ್ತದೆ.

ಮುಕ್ಕಣ್ಣ ಹಣೆಗಣ್ಣ ಎಂದು ಜನಪದದಿಂದ ಕರೆಯಲ್ಪಡುವ ಶಿವ ತನ್ನ ಮೂರನೇ ಕಣ್ಣನ್ನು ತೆರೆದರೆ ಆತನ ಎದುರಿರುವ ಎಲ್ಲವೂ ಭಸ್ಮವಾಗುತ್ತದೆ ಎಂಬ ಪ್ರತೀತಿ ಇದೆ. ಜ್ಞಾನವೆಂಬ ಮೂರನೆಯ ಚಕ್ಷುವನ್ನು ತೆರೆಯುವ ಮೂಲಕ ನಮ್ಮಲ್ಲಿ ಅಡಗಿರುವ ಅಜ್ಞಾನ, ಅಂಧ ಶ್ರದ್ಧೆಗಳನ್ನು ಹೊಡೆದೋಡಿಸಬೇಕು ಎಂಬ ತಿಳುವಳಿಕೆಯನ್ನು ನೀಡುತ್ತಾನೆ.

ತ್ರಿಶೂಲ ಧಾರಿ.... ಹರಿತವಾದ 3 ಅಲಗುಗಳನ್ನು ಒಳಗೊಂಡ ತ್ರಿಶೂಲವೆಂಬ ಆಯುಧವನ್ನು ಹೊಂದಿರುವ ಶಿವನು ಭೂತ, ವರ್ತಮಾನ ಮತ್ತು ಭವಿಷ್ಯಗಳನ್ನು,,ದೇಹ ಮನಸ್ಸು ಮತ್ತು ಆತ್ಮಗಳ ಸಮ್ಮಿಲನದ ಮೂಲತತ್ವವನ್ನು ಹೇಳುತ್ತಾನೆ. ವ್ಯಕ್ತಿಯು ತನ್ನಲ್ಲಿ ಅಂತರ್ಗತವಾಗಿರುವ ಸಾತ್ವಿಕ, ರಾಜಸಿಕ ಮತ್ತು ತಾಮಸಿಕ ಗುಣಗಳನ್ನು ತನ್ನ ಅಧೀನದಲ್ಲಿಯೇ ಇಟ್ಟುಕೊಳ್ಳಬೇಕು ಎಂಬ ರಹಸ್ಯವನ್ನು ನಮಗೆ ತ್ರಿಶೂಲವನ್ನು ಸದಾ ತನ್ನ ಕೈಯಲ್ಲಿ ಹಿಡಿದಿರುವ ಶಿವ ಬೋಧಿಸುತ್ತಾನೆ.

ತ್ರಿಮೂರ್ತಿಗಳಲ್ಲಿ ಒಬ್ಬನಾಗಿರುವ ಶಿವ ಲಯಕರ್ತ. ಸೃಷ್ಟಿ, ಸ್ಥಿತಿಗಳಷ್ಟೇ ಮುಖ್ಯವಾದ ಕಾರ್ಯ ಲಯ. ನಮ್ಮಲ್ಲಿರುವ ತಾಮಸ ಗುಣಗಳನ್ನು ಸುಟ್ಟು ಹಾಕಬೇಕು ಸಾತ್ವಿಕ ತೇಜಸ್ಸನ್ನು ಹೆಚ್ಚಿಸಿಕೊಳ್ಳಬೇಕು ಭೋಗ ಲಾಲಸೆಗಳ ಬದುಕಿಂದ ದೂರವಿದ್ದು ಸದಾ ಸಂತೃಪ್ತಿಯ ನೆಮ್ಮದಿಯ ಬದುಕನ್ನು ಜೀವಿಸಬೇಕು.

ಶಿವನ ಕೈಯಲ್ಲಿರುವ ಡಮರುಗವು ಲಯ ಬದ್ಧವಾದ ನಾದವನ್ನು ಹೊರಡಿಸುವಂತೆ ವ್ಯಕ್ತಿಯು ತನ್ನ ಸಂಸಾರದಲ್ಲಿ ಲಯಬದ್ಧವಾಗಿ ಬದುಕಬೇಕು, ಬಾಳಬೇಕು. ತಾಳ ತಪ್ಪದಂತೆ ಬದುಕಿನ ಡಮರುಗವನ್ನು ನಮ್ಮ ಕೈಯಲ್ಲಿ ಇಟ್ಟುಕೊಂಡು ಒಳ್ಳೆಯನಾದ ಹೊರಡುವಂತೆ ಬಾರಿಸಬೇಕು ಎಂಬುದನ್ನು ಸೂಚ್ಯವಾಗಿ ಹೇಳುತ್ತಾನೆ ಶಿವ.

ಶಿವ ಆದಿ ಯೋಗಿ, ಧ್ಯಾನ ಸಮಾಧಿಯಲ್ಲಿ ಮುಳುಗಿ ಜಗದ ಜಂಜಡಗಳನ್ನು ಕಳೆದುಕೊಳ್ಳಬಹುದು ಎಂಬ ಸತ್ಯವನ್ನು ಜಗತ್ತಿಗೆ ಅರುಹಿದಾತ ಶಿವ. ಸತ್ಯಪ್ರಿಯ ನಾದ ಶಿವ ಭಕ್ತ ಪ್ರಿಯನು ಹೌದು ಭಕ್ತಿ ಪ್ರಿಯನು ಕೂಡ. ಇಂತಹ ಶಿವನನ್ನು ಪೂಜಿಸಲು ಶಿವರಾತ್ರಿಯೇ ಅತ್ಯಂತ ಶ್ರೇಷ್ಠವಾದದ್ದು ಎಂಬ ಪರಿಕಲ್ಪನೆ ನಮ್ಮ ಪೂರ್ವಜರಲ್ಲಿದ್ದು ಇದಕ್ಕೆ ಅನೇಕ ಕಾರಣಗಳು ಉಂಟು. ಬ್ರಹ್ಮ ವಿಷ್ಣುವಿನಲ್ಲಿ ಯಾರು ದೊಡ್ಡವರು ಎಂಬ ವಾಗ್ವಾದಗಳು ಉಂಟಾದಾಗ ಅವರಿಬ್ಬರ ನ್ಯಾಯವನ್ನು ಬಗೆಹರಿಸಲು ಅಗ್ನಿ ಕಂಬ ರೂಪಧಾರಿಯಾಗಿ ತನ್ನ ಮೂಲವನ್ನು ಹುಡುಕಲು ಹೇಳಿದನು ಶಿವ. ಬ್ರಹ್ಮದೇವನು ಹಂಸದ ಮೇಲೆ ಕುಳಿತು ಶಿವನ ತಲೆಯ ಭಾಗವನ್ನು ನೋಡಲು ಮೇಲ್ಮುಖವಾಗಿ ಚಲಿಸಿದರೆ, ವರಾಹ ರೂಪದಲ್ಲಿ ವಿಷ್ಣು ಕೆಳಭಾಗಕ್ಕೆ ಚಲಿಸಿದನು. ಆದರೆ ಇಬ್ಬರಿಗೂ ಶಿವನ ಮೂಲ ದೊರೆಯಲಿಲ್ಲ.ಮೇಲಿನಿಂದ ಬೀಳುತ್ತಿದ್ದ ಕೇದಿಗೆ( ಕೇತಕಿ )ಯ ಹೂವೊಂದನ್ನು ಕಂಡು ಬ್ರಹ್ಮದೇವನು ಪ್ರಶ್ನಿಸಿದಾಗ ತಾನು ಶಿವನ ತಲೆಯಿಂದ ಕೆಳಗೆ ಬೀಳುತ್ತಿರುವೆ ಎಂದು ಹೇಳಿದುದನ್ನು ಕೇಳಿ ಬ್ರಹ್ಮದೇವನು ಮರಳಿ ಬಂದು ತಾನು ಶಿವನ ತಲೆಯ ಮೇಲಿಂದ ಕೇದಿಗೆ( ಕೇತಕಿ) ಹೂವನ್ನು ತಂದಿದ್ದೇನೆ ಎಂದು ಸುಳ್ಳು ನುಡಿಯಲು ಕೋಪಗೊಂಡ ಶಿವನು ಭೂಲೋಕದಲ್ಲಿ ನಿನಗೆ ಪೂಜೆ ನಡೆಯದಿರಲಿ ಎಂದು ಶಾಪ ಕೊಟ್ಟು ತಾನು ಲಿಂಗರೂಪಿಯಾಗಿ ನಿಂತನು. ಆ ದಿನವೇ ಮಾಘ ಮಾಸದ ಚತುರ್ದಶಿಯಾಗಿತ್ತು.

ಮನದ ಅಂಧಕಾರವನ್ನು ಕಳೆಯುವ ತ್ರಯೋದಶಿ ಮತ್ತು ಚತುರ್ದಶಿಗಳ ನಡುವಿನ ಈ ರಾತ್ರಿ ಮನದ ತಮವನ್ನು ಹರಿದು ಸುಜ್ಞಾನದ ಬೆಳಕನ್ನು ಕೊಡು ಎಂದು ಶಿವನನ್ನು ಪೂಜಿಸುವ ಪವಿತ್ರವಾದ, ಎಚ್ಚರ ಸ್ಥಿತಿಯಲ್ಲಿರುವಂತಹ ಈ ರಾತ್ರಿಯಂದು ಶಿವನ ಧ್ಯಾನದಲ್ಲಿ, ಪೂಜೆ, ಜಪತಪಗಳಲ್ಲಿ, ಜಾಗರಣೆಯಲ್ಲಿ ಕಳೆದು ಶಿವನ ಆರಾಧನೆಯಲ್ಲಿ ತೊಡಗುವರು.

ಅಭಿಷೇಕ ಪ್ರಿಯನಾದ ನಿರಾಡಂಬರ ಶಿವನಿಗೆ ಕೇವಲ ನೀರಿನ ಅಭಿಷೇಕ ವಿಭೂತಿ ಬಿಲ್ವಪತ್ರೆ, ತುಂಬೆಯ ಇಲ್ಲವೇ ಕೇದಿಗೆಯ ಹೂವು ಇದ್ದರೆ ಸಾಕು ಆತ ಸಂತೃಪ್ತನಾಗುತ್ತಾನೆ. ಆದ್ದರಿಂದಲೇ ನಮ್ಮ ಶಿವಶರಣರು ಶಿವನು ಕೇವಲ ನಾದ ಮತ್ತು ವೇದಗಳ ಪ್ರಿಯನಲ್ಲ... ಆತ ಭಕ್ತ ಪ್ರಿಯ ಎಂದು ಹಾಡಿ ಹೊಗಳಿದ್ದಾರೆ. ಎಲ್ಲರಿಗೂ ಮಹಾಶಿವರಾತ್ರಿಯ ಶುಭಾಶಯಗಳು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ವಿ.ವಿ.ಗಳ ಸಬಲೀಕರಣಕ್ಕೆ ಸರ್ಕಾರ ಆದ್ಯತೆ ನೀಡಲಿ

## ಜ್ಞಾನ ಪ್ರಸಾರಕ್ಕಾಗಿದೆಯೇ ಹೊರತು ಆರ್ಥಿಕವಾಗಿ ಲಾಭ ಗಳಿಕೆಗಲ್ಲ | ಅನರ್ಹರ ನೇಮಕಕ್ಕೆ ಕಡಿವಾಣ ಇರಲಿ

■ ಡಾ.ಬಿ.ಜಿ. ಕನಕೇಶಮೂರ್ತಿ

ವಿಶ್ವವಿದ್ಯಾಲಯಗಳ ಸಂಖ್ಯೆ ಹಾಗೂ ಗುಣಮಟ್ಟದ ಶಿಕ್ಷಣ ಕುರಿತ ಚರ್ಚೆ ಪ್ರಾರಂಭವಾಗಿದೆ. ಕಾಲಕಾಲಕ್ಕೆ ಸರ್ಕಾರಗಳು ಬದಲಾದಂತೆ ಅವುಗಳ ಚಿಂತನಾಕ್ರಮಗಳಿಗನುಸಾರವಾಗಿ ಶಿಕ್ಷಣ ವ್ಯವಸ್ಥೆಯಲ್ಲಿಯೂ ಮಾರ್ಪಾಡುಗಳಾಗುತ್ತವೆ.



ಈ ಮಾರ್ಪಾಡುಗಳು ಸಕಾರಾತ್ಮಕವಾಗಿರಬಹುದು, ನಕಾರಾತ್ಮಕವಾಗಿಯೂ ಇರ ಬಹುದು, ರಾಜಕೀಯ ಸಿದ್ಧಾಂತ ಪ್ರೇರಿತವಾಗಿಯೂ ಇರಬಹುದು. ಪಠ್ಯಕ್ರಮ, ಬೋಧನೆ, ನೇಮಕಾತಿ, ಸಂಶೋಧನೆ, ಅಗತ್ಯ ಸೌಲಭ್ಯಗಳು ಇವೆಲ್ಲವುಗಳ ಮೇಲೆ ಗಾಢ ಪರಿಣಾಮವನ್ನುಂಟು ಮಾಡುತ್ತವೆ. ಉತ್ಕೃಷ್ಟ ಗುಣಮಟ್ಟದ ಶಿಕ್ಷಣಕ್ಕಾಗಿ ಯುಜಿಸಿ ಹಲವು ಉಪಕ್ರಮಗಳನ್ನು ಕೈಗೊಳ್ಳುತ್ತಿದೆ. ಶ್ರೇಷ್ಠ ಜ್ಞಾನ ಸಂಪಾದನೆಗೆ ಇಂದಿನ ಪೀಳಿಗೆ ಜ್ಞಾನವ್ಯಸನಿಗಳಾಗಬೇಕು. ಅದನ್ನು ಆರ್ಜಿಸಲು ಋಜುಮಾರ್ಗದ ಅನುಸರಣೆ ಮುಖ್ಯವಾದುದು. ಪರಂಪರೆಯ ಆಳವಾದ ತಿಳಿವಿಲ್ಲದೆ ವರ್ತಮಾನದ ಭದ್ರಬುನಾದಿಯನ್ನು ಕಟ್ಟಲಾಗದು.

ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಶಿಕ್ಷಣದ ಗುಣಮಟ್ಟ ಯಾವ ಹಾದಿ ಹಿಡಿದಿದೆ ಎಂಬುದಕ್ಕೆ ಪ್ರತಿನಿತ್ಯ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಬರುತ್ತಿರುವ ಸುದ್ದಿಗಳೇ ಸಾಕ್ಷಿಯಾಗಿವೆ. ಶೈಕ್ಷಣಿಕ ಕಾಲಚಕ್ರದ ಉರುಳುವಿಕೆ ಊರ್ಧ್ವಮುಖಕ್ಕಿಂತ, ಅಧೋಮುಖವಾಗುತ್ತಿರುವುದು ವಿಷಾದನೀಯ. ಜ್ಞಾನಾಸಕ್ತಿಯುಳ್ಳವರಿಗೆ ಪರಿಪೂರ್ಣ ಜ್ಞಾನ ದೊರಕುತ್ತಿಲ್ಲ. ತಳಮಟ್ಟದಿಂದ ಮೇಲ್ತುದಿಯವರೆಗೆ ಎಲ್ಲಾ ಹಂತಗಳಲ್ಲೂ ನಡೆಯುತ್ತಿರುವ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಶಿಫಾರಸು ಮುಂತಾದವುಗಳಿಗೆ ಕಡಿವಾಣ ಬೀಳದ ಹೊರತು ಉನ್ನತ ಶಿಕ್ಷಣದಲ್ಲಿ ಗುಣಮಟ್ಟದ ನಿರೀಕ್ಷಣೆ ಕನಸಿನ ಮಾತು. ಹಾಗಾದರೆ ಅದಕ್ಕೆ ಕಡಿವಾಣ ಹಾಕುವವರು ಯಾರು? ಎಂಬುದು ಯಕ್ಷಪ್ರಶ್ನೆಯಾಗಿದೆ. ವಿಶ್ವವಿದ್ಯಾಲಯಗಳೆಂದರೆ ವಿಶ್ವವಿದ್ಯೆಯನ್ನು ಪ್ರಸರಿಸುವ ಪಾವಿತ್ರ್ಯತೆಯನ್ನು ಹೊಂದಿದ ಶಿಕ್ಷಣ ಕೇಂದ್ರಗಳು. ಬೋಧನಾಂಗ, ಅಧ್ಯಯನಾಂಗ, ಸಂಶೋಧನಾಂಗ ಮತ್ತು ಪ್ರಸಾರಾಂಗ – ಈ ನಾಲ್ಕು ಯಾವುದೇ ವಿಶ್ವವಿದ್ಯಾಲಯದ ಪ್ರಧಾನ ಅಂಗಗಳು. ಈ ಎಲ್ಲವೂ ಸಮರ್ಪಕವಾಗಿ ಕೆಲಸ ನಿರ್ವಹಿಸಿದಾಗ ಮಾತ್ರ ವಿಶ್ವವಿದ್ಯಾಲಯ ಎನಿಸಿಕೊಳ್ಳುತ್ತದೆ' ಎಂದು ರಾಷ್ಟ್ರಕವಿ ಕುವೆಂಪು ಅವರು ಹೇಳಿದ್ದಾರೆ. ರಾಜ್ಯದಲ್ಲಿ ಈಗಿರುವ ವಿಶ್ವವಿದ್ಯಾಲಯಗಳಲ್ಲಿ ಕೆಲವನ್ನು ಹೊರತುಪಡಿಸಿದರೆ, ಉಳಿದವುಗಳಲ್ಲಿ ಈ ನಾಲ್ಕು ಅಂಗಗಳ ಕಾರ್ಯವೈಖರಿ ಜನತೆಗೆ ತಿಳಿದೇ ಇದೆ. ಅವು ವಿಕಲಾಂಗವಾಗಿವೆ. ಇದಕ್ಕೆ ಸರ್ಕಾರದಿಂದ ದೊರಕಬೇಕಾದ ಆರ್ಥಿಕ ನೆರವು, ಸೌಲಭ್ಯಗಳ ಕೊರತೆ ಒಂದು ಕಡೆಯಾದರೆ, ವಿವಿಗಳ ಮುಖ್ಯಸ್ಥರ, ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆ ಅಥವಾ ಬೇರೇನೋ ಆಸಕ್ತಿ ಮತ್ತೊಂದು ಕಡೆಯಾಗಿದೆ.

ಇಂಥ ಸಂದರ್ಭದಲ್ಲಿ ಪದವಿಗಳನ್ನು ಪಡೆದ ವಿದ್ಯಾರ್ಥಿಗಳು ತಮ್ಮ ಸ್ವಂತ ಕಾಲ ಮೇಲೆ ನಿಲ್ಲಲು, ನೌಕರಿಗಾಗಿ ಪಡುವ ಪಡಿಪಾಟಲು, ಅಕಸ್ಮಾತ್ ನೌಕರಿ ದೊರೆತ ಮೇಲೆ ಅವರು ರೂಢಿಸಿಕೊಳ್ಳುವ ಮನಃಸ್ಥಿತಿ ಊಹೆಗೂ ನಿಲುಕದ್ದು.

ಜಿಲ್ಲೆಗೊಂದರಂತೆ ಇತ್ತೀಚೆಗೆ ವಿಶ್ವವಿದ್ಯಾಲಯಗಳನ್ನು ಸರ್ಕಾರ ತೆರೆಯುತ್ತಿರುವುದರಿಂದ ಎದುರುಗೊಳ್ಳುವ ಅನಾಹುತಗಳನ್ನು, ಉದ್ಯೋಗದ ಸಮಸ್ಯೆಯನ್ನು ಕುರಿತು ನಲವತ್ತು ವರ್ಷಗಳ ಹಿಂದೆಯೇ ಅಂದಿನ ವಿಶ್ವವಿದ್ಯಾಲಯಗಳ ಕಾರ್ಯವೈಖರಿ ಕುರಿತು ಕನ್ನಡದ ಕಟ್ಟಾಳು ಡಾ. ಹಾ. ಮಾ.ನಾಯಕ ಅವರು "ಮೂರ್ನಾಲ್ಕು ವರ್ಷ ವಿಶ್ವವಿದ್ಯಾಲಯಗಳನ್ನು ಮುಚ್ಚಿದರೆ ಒಳಿತು ಏಕೆಂದರೆ ಈವರೆಗೆ ಉನ್ನತ ಶಿಕ್ಷಣ ಪಡೆದ ಬಹುತೇಕರಿಗೆ ಉದ್ಯೋಗಾವಕಾಶಗಳು ದೊರೆತು, ನಿರುದ್ಯೋಗ ಸಮಸ್ಯೆ ಸ್ವಲ್ಪಮಟ್ಟಿಗಾದರೂ ಕಡಿಮೆಯಾಗಬಹುದು. ನಂತರ ವಿಶ್ವವಿದ್ಯಾ ಲಯಗಳನ್ನು ಮರುಪ್ರಾರಂಭಿಸಬಹುದು" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಈ ಮಾತು ಇಂದಿಗೂ ಪ್ರಸ್ತುತವೆನಿಸುತ್ತದೆ.

ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆಯ ಜೊತೆಗೆ ಕಾಲೇಜುಗಳಿಗೂ ಸ್ನಾತಕೋತ್ತರ ಕೋರ್ಸ್‌ಗಳನ್ನು, ಸ್ನಾತಕೋತ್ತರ ಕೇಂದ್ರಗಳನ್ನು ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಸಮೀಪದಲ್ಲಿ ಸ್ನಾತಕೋತ್ತರ ಪದವಿ ಪಡೆಯುವ ಸದವಕಾಶವೇನೋ ದೊರೆಯುವುದು ಸಹಜ ಹಾಗೂ ಉಪಯುಕ್ತವೇ. ಆದರೆ ವಿಶ್ವವಿದ್ಯಾಲಯದ ಆವರಣದಲ್ಲಿ ಪಡೆಯುವ ಶಿಕ್ಷಣಕ್ಕೂ ಕಾಲೇಜುಗಳಲ್ಲಿ ಪಡೆಯುವ ಶಿಕ್ಷಣಕ್ಕೂ ಅಜಗಜಾಂತರ ಅಂತರವಿರುತ್ತದೆ. ಕಾಲೇಜುಗಳಲ್ಲಿನ ಅಧ್ಯಾಪಕರು ಯು.ಜಿ. ತರಗತಿಗಳಿಗೆ ಹೇಗೆ ಬೋಧಿಸುತ್ತಾರೋ, ಅಂತೆಯೇ ಪಿ.ಜಿ. ತರಗತಿಗಳಿಗೂ ಬೋಧಿಸುತ್ತಾರೆ. ಬೋಧನಾ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಗ್ರಂಥಾಲಯದ ವ್ಯವಸ್ಥೆಯೂ ಅಷ್ಟಕ್ಕಷ್ಟೇ. ವಿಶ್ವವಿದ್ಯಾಲಯಗಳಲ್ಲೂ ಬೋಧನೆ ಎಂಬುದು ಇತ್ತೀಚೆಗೆ ಯಾವ ಮಟ್ಟಕ್ಕಿಳಿದಿದೆ ಎಂದರೆ, ಹೇಗೋ ಪಠ್ಯಕ್ರಮ ಪೂರೈಸುವ ಪರಿಪಾಠವನ್ನು ಕಾಣಬಹುದು.

ಬಹುಪಾಲು ಬೋಧಕರು ಮತ್ತು ವಿದ್ಯಾರ್ಥಿಗಳಿಬ್ಬರಲ್ಲೂ ಅಧ್ಯಯನಾಸಕ್ತಿ ಕುಂಠಿತವಾಗಿದೆ. ಪದೋನ್ನತಿಯನ್ನು ಪಡೆದು ಪ್ರಾಧ್ಯಾಪಕರಾದರೆ ಸಾಕು ಮತ್ತೇನನ್ನೂ ಓದಬೇಕೆಂಬ, ಸಂಶೋಧನೆ ಕೈಗೊಳ್ಳಬೇಕೆಂಬ ಕಿಂಚಿತ್ ಕಾಳಜಿಯನ್ನೂ ಹೊಂದಿರದವರ ಸಂಖ್ಯೆ ಅಧಿಕ. ಬೌದ್ಧಿಕತೆಯನ್ನು ಹೆಚ್ಚಿಸಿಕೊಳ್ಳಬೇಕೆಂಬ ವೃತ್ತಿಬದ್ಧತೆ, ಪ್ರಾಮಾಣಿಕ ಪ್ರಯತ್ನಗಳಿಂದ ಅವರು ಬಹುದೂರವೇ ಉಳಿಯುತ್ತಾರೆ. ಇನ್ನು ವಿದ್ಯಾರ್ಥಿಗಳು ಮೊಬೈಲ್ ಮೊದಲಾದ ಆಧುನಿಕ ತಂತ್ರಜ್ಞಾನಗಳ ದಾಸರಾಗಿ, ಪುಸ್ತಕಗಳ ಓದಿನಿಂದ ದೂರವೇ ಉಳಿಯುತ್ತಿದ್ದಾರೆ. ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಕೆಗೆ ಎಷ್ಟು ಬೇಕೋ ಅಷ್ಟಕ್ಕೆ ಸೀಮಿತರಾಗುತ್ತಾರೆ. ಜ್ಞಾನ ಸಂಪಾದನೆ, ವಿವೇಕ ಗಳಿಕೆಗಳತ್ತ ತಿರುಗಿಯೂ ನೋಡುವುದಿಲ್ಲ.

ಪ್ರಾಮಾಣಿಕ ವ್ಯಕ್ತಿತ್ವ, ಪಾರದರ್ಶಕತೆ ಮತ್ತು ಮೌಲಿಕ ಮುನ್ನೋಟ ಉಳ್ಳವರು ವಿಶ್ವವಿದ್ಯಾಲಯಗಳ, ಕಾಲೇಜುಗಳ ಉನ್ನತ ಸ್ಥಾನಗಳಲ್ಲಿದ್ದರೆ ಮಾತ್ರ ಗುಣಮಟ್ಟದ ಶಿಕ್ಷಣವನ್ನು ನಿರೀಕ್ಷಿಸಲು ಸಾಧ್ಯ. ವಿದ್ಯಾರ್ಥಿಗಳನ್ನು ರಾಷ್ಟ್ರಮಟ್ಟದಲ್ಲಿ, ಜಾಗತಿಕ ಮಟ್ಟದಲ್ಲಿ ಸಲ್ಲುವಂತೆ ಬೋಧನೆ, ಪಠ್ಯಕ್ರಮಗಳು ರೂಪಿತವಾಗಬೇಕು. ಪ್ರಾದೇಶಿಕತೆಗೆ ಹೆಚ್ಚಿನ ಒತ್ತುಕೊಟ್ಟು ಸಿದ್ಧವಾದ ಪಠ್ಯಕ್ರಮದಿಂದ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳಿಗೆ ಯಶಸ್ಸು ದೊರಕದೆ ಅನ್ಯಾಯವಾಗುತ್ತದೆ.

ಶಿಕ್ಷಣ ವ್ಯವಸ್ಥೆ ಒಂದು ಸರಪಳಿ ಇದ್ದಂತೆ ಒಂದಕ್ಕೊಂದು ಸಂಬಂಧದ ಕೊಂಡಿರುತ್ತದೆ. ಪದವಿ ಕಾಲೇಜುಗಳಿಗೆ ಅಲ್ಲಿ ಪ್ರವೇಶ ಪಡೆಯುವ ಪಿ.ಯು. ಕಾಲೇಜುಗಳು ಅಗತ್ಯ. ಅಂತೆಯೇ ವಿಶ್ವವಿದ್ಯಾಲಯಗಳು ನಡೆಯಲು ಪದವಿ ಕಾಲೇಜುಗಳು ಮುಖ್ಯ. ಆದರೆ ಎಷ್ಟೋ ಕಡೆಗಳಲ್ಲಿ ಪಿ.ಯು. ಕಾಲೇಜುಗಳು ಇಲ್ಲದ ಕಡೆ ಯಾವುದೋ ಒತ್ತಡಗಳಿಂದ ಪದವಿ ಕಾಲೇಜುಗಳನ್ನು ತೆರೆಯಲಾಗಿದೆ. ಕಾಲೇಜುಗಳನ್ನು ಉಳಿಸಿಕೊಳ್ಳಲು ಮನೆಯಲ್ಲಿ ಕುಳಿತಿರುವವರನ್ನು, ಪ್ರವೇಶ ಮಾಡಿಸಿ ಅವರು ಕಾಲೇಜಿಗೆ ಬರದಿದ್ದರೂ ದಾಖಲಾತಿಯಲ್ಲಿ ಮಾತ್ರ ಅವರ ಹೆಸರಿರುವಂತೆ ನೋಡಿಕೊಳ್ಳಲಾಗುತ್ತದೆ!. ಹೀಗಿರುವಾಗ ಆ ಕಾಲೇಜುಗಳ ಪ್ರವೇಶಾತಿ ಹೆಚ್ಚಳವಾಗುವುದು ಹೇಗೆ. ಅಂತೆಯೇ ಇಂತಿಷ್ಟು ಸಂಯೋಜಿತ ಪದವಿ ಕಾಲೇಜುಗಳು, ಬಿ.ಇಡಿ. ಬಿ.ಪಿ.ಇಡಿ. ಕಾಲೇಜುಗಳು ಇದ್ದಲ್ಲಿ ವಿಶ್ವವಿದ್ಯಾಲಯದ ವ್ಯವಸ್ಥೆ ಸಮರ್ಪಕ ವಾಗಿರುತ್ತದೆ. ಆದರೆ ಇಲ್ಲಿಯೂ ಹಲವು ಲೋಪಗಳು ಕಂಡುಬರುತ್ತವೆ.

ಪ್ರಸಾರಾಂಗ ಮೌಲಿಕ ಕೃತಿಗಳ ಪ್ರಕಟಣೆಯ ಹಾಗೂ ಪ್ರಚಾರೋಪನ್ಯಾಸಗಳ, ವಿಶೇಷ ಚಟುವಟಿಕೆಗಳ ಮೂಲಕ ಜ್ಞಾನ ಪ್ರಸಾರಕ್ಕಾಗಿದೆಯೇ ಹೊರತು ಆರ್ಥಿಕವಾಗಿ ಲಾಭ ಗಳಿಕೆಗಲ್ಲ. ಮೇಲಧಿಕಾರಿಗಳು ಇದನ್ನು ಮನಗಾಣಬೇಕು. ಅರ್ಹ ವ್ಯಕ್ತಿಗಳಿಗೆ ಸೂಕ್ತ ಸ್ಥಾನಗಳು ಲಭ್ಯವಾಗಬೇಕು. ಆದರೆ, ಅದಕ್ಕೆ ಬದಲಾಗಿ ಸೂಕ್ತ ಸ್ಥಾನಕ್ಕೆ ಅನರ್ಹರನ್ನು ನೇಮಕ ಮಾಡಿದಲ್ಲಿ ಏನೆಲ್ಲಾ ಅನಾಹುತಗಳಾಗುತ್ತವೆ ಎಂಬುದಕ್ಕೆ ಹಲವು ನಿದರ್ಶನಗಳಿವೆ. ಈ ಹಿನ್ನೆಲೆಯಲ್ಲಿ ಸರ್ಕಾರ ಈಗಾಗಲೇ ಇರುವ ವಿಶ್ವವಿದ್ಯಾಲಯಗಳಿಗೆ ಅಗತ್ಯವಾದ ಎಲ್ಲ ಬಗೆಯ ಮೂಲ ಸೌಕರ್ಯ, ಆರ್ಥಿಕ ನೆರವು, ನೇಮಕಾತಿ ಮೊದಲಾದ ಸೌಲಭ್ಯಗಳನ್ನು ಆದ್ಯತೆ ನೀಡಿ ಒದಗಿಸುವುದು, ಅವುಗಳನ್ನು ಸಬಲೀಕರಣಗೊಳಿಸುವುದು ಸೂಕ್ತ.

---

# ಮಕ್ಕಳ ದೈನಂದಿನ ವ್ಯವಹಾರಕ್ಕಾಗಿ ಕನ್ನಡ ತಿಳುವಳಿಕೆ, ಗಣಿತ ಅತ್ಯಗತ್ಯ

## ಇಸಿಓ ಬಸವರಾಜಯ್ಯ ಎನ್.ಎಂ. ಹೇಳಿಕೆ



■ ಹಂಪಿ ಟೈಮ್ಸ್ ಕೊಟ್ಟೂರು.

ಮಕ್ಕಳ ದೈನಂದಿನ ವ್ಯವಹಾರಕ್ಕಾಗಿ ಕನ್ನಡ ತಿಳುವಳಿಕೆ ಮತ್ತು ಗಣಿತದ ಬುನಾದಿ ಸಂಖ್ಯಾ ತಜ್ಞತೆ ಅತ್ಯಗತ್ಯ ಎಂದು ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಸವರಾಜಯ್ಯ ಎನ್. ಎಂ. ಅಭಿಪ್ರಾಯಪಟ್ಟರು

ಕೊಟ್ಟೂರು ತಾಲೂಕಿನ ಉಜ್ಜಿನಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾತಜ್ಞತೆ ಕಲಿಕಾ ಹಬ್ಬದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಉಜನಿ ಕ್ಲಸ್ಟರ್ ಸಮೂಹ ಸಂಪನ್ಮೂಲ ಕೇಂದ್ರದ ಸಮೂಹ ಸಂಪನ್ಮೂಲ ವ್ಯಕ್ತಿಯಾದ ಗಿರಿಜಾ ಬಣಕಾರ್ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯಲ್ಲಿ ಎಫ್ ಎಲ್ ಎನ್ ಸಾಧಿಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಹಾಕಿಕೊಂಡ ಅನೇಕ ಕಾರ್ಯಕ್ರಮಗಳಲ್ಲಿ ಕಲಿಕಾ ಹಬ್ಬವೂ ಒಂದಾಗಿದ್ದು, ಅದನ್ನು ಈಡೇರಿಸುವ ನಿಟ್ಟಿನಲ್ಲಿ ನಾವೆಲ್ಲರೂ ಒಂದಾಗಿ ಕಾರ್ಯನಿರ್ವಹಿಸಬೇಕೆಂದರು.

ಮರುಳನಗೌಡ್ರು ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಕೊಟ್ಟೂರು ಘಟಕದ ಅಧ್ಯಕ್ಷರು ಕಾರ್ಯಕ್ರಮದ ಕುರಿತು ಇಂದಿನ ಮಕ್ಕಳಿಗೆ ಇರುವಂತಹ ವಿಫಲ ಅವಕಾಶಗಳು ಕುರಿತು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಎಸ್ ಡಿ ಎಮ್ ಸಿ ಅಧ್ಯಕ್ಷರು ಅಲ್ಲಾಭಕ್ಷಿ ವಹಿಸಿದ್ದರು, ಉಪಾಧ್ಯಕ್ಷೆ ರೇಣುಕ, ಉಜ್ಜಿನಿ ಗ್ರಾಮ ಪಂಚಾಯಿತಿ ಸದಸ್ಯ ಸಿದ್ದೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸರೋಜಮ್ಮ ಜಿ ನಿರೂಪಿಸಿದರು, ಪ್ರವೀಣ್ ಉತ್ತಂಗಿ ಸ್ವಾಗತಿಸಿದರು,ಸುಮ ಕೆ ಹೆಚ್ ವಂದಿಸಿದರು.

ಕಾರ್ಯಕ್ರಮದಲ್ಲಿ ಕ್ಲಸ್ಟರ್ನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ತಿಪ್ಪಮ್ಮ ಎಸ್ ಮತ್ತು ಆಶಾ , ಮರುಳ ಸಿದ್ದೇಶ್ವರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುನಿರಾ ಬೇಗಮ್ ಶಿಕ್ಷಕಿ, ಶ್ವೇತರಾಣಿ ,ಬೆನಕನಹಳ್ಳಿ ಶಾಲೆಯ ಮುಖ್ಯ ಗುರುಗಳಾದ ಲೀಲಾ,ಅಂಬುಜಾ ಶಿಕ್ಷಕಿ, ಮಂಗಾಪುರ ಶಾಲೆಯ ಮಂಜುಳಾ,ಚೆನ್ನಮ್ಮ ಶಿಕ್ಷಕಿ, ಗಾಣಗಟ್ಟೆ ಶಾಲೆಯ ಪಾರ್ವತಿ, ಪದ್ಮಾವತಿ ,ನಿಂಬಳಗೆರೆ ಶಾಲೆಯ ಶಿಕ್ಷಕ ಸಿದ್ದೇಶ್ ಮತ್ತು ಅಶ್ವಿನಿ , ಭೈರದೇವರ ಗುಡ್ಡದ ಶಾಲೆಯ ಶಾಂಭವಿ , ಅಶ್ವಿನಿಬೆಳದೇರಿ ಶಾಲೆಯ ರೇಣುಕಮ್ಮ ಶಿಕ್ಷಕಿ ಹಾಜರಿದ್ದರು.

ಸಿದ್ದೇಶ್ವರ ಕ್ಯಾಂಪ್ ಶಾಲೆಯ ಮುಖ್ಯೋಪಾಧ್ಯಾಯರು ಭುವನೇಶ್ವರಿ ಹಾಜರಿದ್ದು ತೀರ್ಪುಗಾರರಾಗಿ ಕರ್ತವ್ಯ ನಿರ್ವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಕ್ಲಸ್ಟರ್ ಮಟ್ಟದ ಎಲ್ಲಾ ಶಾಲೆಗಳಿಂದ 3,4 ಮತ್ತು 5ನೇ ತರಗತಿ ವಿದ್ಯಾರ್ಥಿಗಳು ಆಗಮಿಸಿ ಕಾರ್ಯಕ್ರಮಕ್ಕೆ ಮೆರುಗು ತಂದರು. ಕಾರ್ಯಕ್ರಮವನ್ನು ಆಯೋಜಿಸಿದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕ ಬಳಗಕ್ಕೆ. ಬಿಆರ್‌ಪಿ ಸರ್ ಅಭಿನಂದಿಸಿದರು.

---

## ಕವಿ ಮನಸು

### ಸರ್ವವೂ ಶಿವನಲ್ಲವೇ



ಭವ ಬಂಧನದ ಭಾವನೆಯ ಕಳಚಿರುವ
ಭವ ಭಾವ ನಿರಾಕಾರ ಶಿವನಲ್ಲವೇ?

ಬಂಧು ಸಂಕೋಲೆಗಳಿಲ್ಲ
ನನ್ನವರೆ ನನಗಿಲ್ಲೆಂದು ಉಲಿದ
ಅಘೋರಿಗಳಿಗೆ ಅಘೋರಿ
ಭವದ ತಂದೆ ಶಿವನಲ್ಲವೇ?

ನಂಜನುಂಡ ನಂಜುಂಡ
ಉಳಿಸಿದನು ಬ್ರಹ್ಮಾಂಡ
ಶುಕ–ಪಿಕಗಳುಲಿಯೆಲ್ಲ ನಮ್ಮ
ಶಿವನಲ್ಲವೇ?

ಸರ್ವಾಂಗ ಸುಂದರನು ಕುರೂಪಿಗಳಲಿ
ಕುರೂಪಿ
ನಿರ್ವಿಕಾರ ನಿರಾಮಯ
ನಮ್ಮ ಶಿವನಲ್ಲವೇ?

ಪಶುಪಕ್ಷಿ ನರ ನಾರಿ ಗಿರಿತೊರೆ ವನಸಿರಿ
ಸರ್ವರೋಳ್ ಬೆರೆತವನು ಶಿವನಲ್ಲವೇ?

ಉಸಿರೊಳಗೆ ಉಸಿರಾಗಿ
ಬಾಳಿಂಗೆ ಬೆಳಕಾಗಿ
ಸರ್ವಕಾಲಕು ಎನ್ನೊಡೆಯ
ಶಿವನಲ್ಲವೇ?

ಭಸ್ಮ ಇಟ್ಟವನಂತೆ ಸ್ಮಶಾನ ವಾಸಿಯಂತೆ
ಸರ್ಪಭೂಷಣ
ಲೋಕ ತಂದೆ ಶಿವನಲ್ಲವೇ?

ಮಗುವಿನೊಳು ನಗುವಾಗಿ
ವಯಸ್ಕನೋಳ್ ಚಿಂತನವಾಗಿ
ಹಿರಿಯರೋಳ್ ಅನುಭವವಾಗಿ
ದೊರೆಯುವವ ನನ್ನ ಶಿವನಲ್ಲವೇ?

ಎನ್ನಪ್ಪ ಎನ್ನೊಡೆಯ ಕರಮುಗಿದು
ಬೇಡಿದೊಡೆ ಕರವಿಡಿದು ಪೊರೆಯುವವ
ಶಿವನಲ್ಲವೇ?

ಕೃತಿ ಕೃತಿಯಲು ಮತಿ ಮತಿಯಲು
ಸದ್ಗತಿಯ ಸ್ಫೂರ್ತಿಕಿಡಿ ನನ್ನ ಶಿವನಲ್ಲವೇ?

ತನ್ನಿರುವಿಕೆಯ ತೋರಿಸುತ
ನಂಬಿಕೆಯ ಹೊನಲಾಗಿ
ನಮ್ಮೊಡನೆ ಇಲ್ಲದಿದ್ದರೂ ಇರುವ ಹಾಗೆ
ಇರುವವನು ಶಿವನಲ್ಲವೇ?


– ಸಿಂಧುಗುಬ್ಬಿ
ಹೇರೂರು, ಗುಬ್ಬಿ ತಾಲ್ಲೂಕು

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

**26–02–2025 – ಬುಧವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಶ್ರಾವಣ |
| ಯೋಗ | : ಪರಿಘ |
| ಕರಣ | : ವಾಣಿಜ |
| ಸೂರ್ಯೋದಯ | : 06:52:16 |
| ಸೂರ್ಯಾಸ್ತ | : 18:27:33 |
| ರಾಹು ಕಾಲ | : 12:40–14:07 |
| ಯಮಘಂಡ ಕಾಲ | : 08:19–09:46 |
| ಗುಳಿಕ ಕಾಲ | : 11:13–12:40 |



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 25–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1608.69 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 8104 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 35.068 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1587.25 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 763 ಕ್ಯುಸೆಕ್ |
| ಸಾಮರ್ಥ್ಯ | 8.885 ಟಿಎಂಸಿ |

## Classified

### ಹೆಸರು ಬದಲಾವಣೆ

ನಾನು, **ಆರ್.ಶೈಲಜಾ** ಗಂಡ **ರಾವಿ ರಮೇಶ್,** ವಾಸ॥ ಮುಟುಗನಹಳ್ಳಿ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ ನಿವಾಸಿಯಾಗಿದ್ದು, ವಕೀಲರು ಮತ್ತು ನೋಟರಿ **ಪಿ.ಛತ್ರಪ್ಪ ಹೆಚ್.ಬಿ.ಹಳ್ಳಿ** ಇವರ ಮೂಲಕ ಪ್ರಮಾಣೀಕರಿಸುವುದೇನಂದರೆ, ನಾನು ದಿನಾಂಕ: **19/01/2017** ರಲ್ಲಿ **ಶ್ರೀ ರಕ್ಷಾ ಆಸ್ಪತ್ರೆ** ಹೊಸಪೇಟೆಯಲ್ಲಿ ಗಂಡು ಮಗುವಿಗೆ ಜನ್ಮ ನೀಡಿದ್ದು, ಜನನ ಪ್ರಮಾಣಪತ್ರದಲ್ಲಿ ಮಗುವಿನ ಹೆಸರು **ರಾವಿ ಪಾರ್ಥೀವ್ ಸಾಯಿ** ಅಂತಾ ತಪ್ಪಾಗಿ ನಮೂದು ಆಗಿದ್ದು, ಸದರಿ ಜನನ ಪ್ರಮಾಣಪತ್ರದ ವಿಳಾಸದಲ್ಲಿ **ಮುಟುಗನಹಳ್ಳಿ** ಗ್ರಾಮ **ಬ್ಯಾಸಿಗಿದೇರಿ** ಪೋಸ್ಟ್ ಪಿನ್‌ಕೋಡ್ ಸಹ ನಮೂದಾಗಿರುವುದಿಲ್ಲ. ಕಾರಣ ಮಗುವಿನ ಹೆಸರು **ರಾವಿ ಪವನ್ ಕುಮಾರ್ (RAAVI PAVAN KUMAR)** ಅಂತಾ ಮತ್ತು ವಿಳಾಸದಲ್ಲಿ **ಮುಟುಗನಹಳ್ಳಿ** ಗ್ರಾಮ ಬ್ಯಾಸಿಗಿದೇರಿ ಪೋಸ್ಟ್ **ಪಿನ್‌ಕೋಡ್–583224** ಎಂದು ನಮೂದು ಮಾಡಿಕೊಡಬೇಕೆಂದು ಈ ಮೂಲಕ ಕೋರಿಕೊಳ್ಳುತ್ತೇನೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!

---

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI


ಈಗಿಂದಲೇ ಪುನರ್‌ಮನನ ಮಾಡಿ | ಪರೀಕ್ಷೆಗೆ ನಾವು ಸಿದ್ಧ 24 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು | https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ | ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಗಣಿತ

### ಸ್ಕೋರಿಂಗ್ ಪತ್ರಿಕೆ – 2

10) ಒಂದು ಗೋಪುರ ಮತ್ತು ಕಂಬ ಒಂದೇ ಸಮತಟ್ಟಾದ ನೆಲದ ಮೇಲೆ ನೇರವಾಗಿ ನಿಂತಿವೆ. 60ಮೀಟರ್ ಎತ್ತರದ ಗೋಪುರದ ಮೇಲಿನಿಂದ ಕಂಬದ ಮೇಲ್ತುದಿ ಮತ್ತು ಅದರ ಪಾದಗಳನ್ನು ನೋಡಿದಾಗ ಅವನತ ಕೋನಗಳು ಕ್ರಮವಾಗಿ $30^0$ ಮತ್ತು $60^0$ ಆಗಿದೆ.ಆ ಕಂಬದ ಎತ್ತರವನ್ನು ಕಂಡು ಹಿಡಿಯಿರಿ




11) ಒಂದು ಕಾರು 360 ಕಿಲೋಮೀಟರ್ ದೂರವನ್ನು ಏಕರೂಪ ಜವದೊಂದಿಗೆ ಕ್ರಮಿಸುತ್ತದೆ ಅದರ ಜವವು 5 ಕಿ.ಮೀ /ಗಂಟೆ ಹೆಚ್ಚಾಗಿದ್ದರೆ ಅಷ್ಟೇ ದೂರವನ್ನು ಕ್ರಮಿಸಲು ಅದು ಒಂದು ಗಂಟೆ ಕಡಿಮೆ ತೆಗೆದುಕೊಳ್ಳುತ್ತಿತ್ತು ಕಾರಿನ ಜವವನ್ನು ಕಂಡುಹಿಡಿಯಿರಿ.

12) ಇಂಧನ ಉಳಿತಾಯ ಮಾಡಲು ವಾಯುಮಾಲಿನ್ಯ ತಪ್ಪಿಸಲು ಮತ್ತು ಉತ್ತಮ ಆರೋಗ್ಯಕ್ಕಾಗಿ A ಮತ್ತು B ಇಬ್ಬರು ವ್ಯಕ್ತಿಗಳು 12 ಕಿಲೋಮೀಟರ್ ದೂರದಲ್ಲಿರುವ ತಮ್ಮ ಕಚೇರಿಗೆ ತಲುಪಲು ಸೈಕಲ್ ಓಡಿಸುತ್ತಾರೆ B ಸೈಕಲ್ ಓಡಿಸುವ ಸರಾಸರಿ ಜವವು Aಗಿಂತ ಎರಡು ಕಿಲೋಮೀಟರ್ /ಗಂಟೆ ಹೆಚ್ಚಾಗಿರುವುದರಿಂದ Bಯು ಕಚೇರಿಯನ್ನು ತಲುಪಲು A ಗಿಂತ 30 ನಿಮಿಷ ಕಡಿಮೆ ಸಮಯವನ್ನು ತೆಗೆದುಕೊಳ್ಳುವರು A ಮತ್ತು B ಯು ಕಚೇರಿ ತಲುಪಲು ತೆಗೆದುಕೊಳ್ಳುವ ಸಮಯವನ್ನು ಕಂಡುಹಿಡಿಯಿರಿ.

13) ಇಬ್ಬರು ವ್ಯಕ್ತಿಗಳ ಆದಾಯಗಳ ಅನುಪಾತ 9:7 ಮತ್ತು ಅವರ ಖರ್ಚುಗಳ ಅನುಪಾತ 4:3 ಪ್ರತಿಯೊಬ್ಬರು ತಿಂಗಳಿಗೆ ರೂ.2000 ಉಳಿತಾಯ ಮಾಡಿದರೆ ಅವರ ಮಾಸಿಕ ಆದಾಯವನ್ನು ಕಂಡುಹಿಡಿಯಿರಿ

14) ಒಂದು ಸಮಾಂತರ ಶ್ರೇಢಿಯ n ಪದಗಳ ಮೊತ್ತ 210 ಮತ್ತು ಮೊದಲ (n –1)ಪದಗಳ ಮೊತ್ತ 171 ಆಗಿದ್ದು ಶ್ರೇಢಿಯ ಮೊದಲನೇ ಪದ 3 ಆದಾಗ ಸಮಾಂತರ ಶ್ರೇಢಿ ಕಂಡುಹಿಡಿಯಿರಿ.

15) $ABCD$ಯು 14 $cm$ ಬಾಹುವುಳ್ಳ ಚೌಕವಾಗಿದೆ. $P$, $Q$, $R$ ಮತ್ತು $S$ ಗಳು ಈ ಚೌಕದ ಬಾಹುಗಳ ಮಧ್ಯಬಿಂದುಗಳಾಗಿವೆ. ಚೌಕದ ಬಾಹುಗಳ ಮಧ್ಯಬಿಂದುಗಳನ್ನು ಸ್ಪರ್ಶಿಸುವಂತೆ ಚೌಕದ ಒಳಗೆ ವೃತ್ತವನ್ನು ಎಳೆಯಲಾಗಿದೆ. $PQ$, $QR$, $RS$ ಮತ್ತು $SP$ ವೃತ್ತದ ಕಂಸಗಳಾಗಿವೆ. ಚಿತ್ರದಲ್ಲಿ ಛಾಯೆಗೊಳಿಸಿದ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.




www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಎಂ.ಎಸ್.ಮಂಜುನಾಥ, ಶಿಕ್ಷಕರು, ಚಿಲುಗೋಡು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

## ಮೈಕ್ರೋ ನ್ಯೂಸ್

### ಕುರುವತ್ತಿ ಜಾತ್ರ ಮಹೋತ್ಸವ: ಮದ್ಯ ಮಾರಾಟ ನಿಷೇಧ

■ **ಹಂಪಿ ಟೈಮ್ಸ್ ಹೊಸಪೇಟೆ:**
ಹಡಗಲಿ ತಾಲ್ಲೂಕು ಕುರುವತ್ತಿ ಗ್ರಾಮದಲ್ಲಿ ಫೆ.28 ರಿಂದ ಮಾ.2 ವರೆಗೆ ಶ್ರೀ ಮಲ್ಲಿಕಾರ್ಜುನಸ್ವಾಮಿ ಮತ್ತು ಶ್ರೀ ಬಸವೇಶ್ವರಸ್ವಾಮಿ ರಥೋತ್ಸವ ಹಾಗೂ ಜಾತ್ರಾ ಮಹೋತ್ಸವ ಜರುಗಲಿದೆ. ಈ ಹಿನ್ನಲೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಮದ್ಯ ಮಾರಾಟ ನಿಷೇಧಿಸಿ ಆದೇಶ ಹೊರಡಿಸಿದ್ದಾರೆ. ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 21ರ ಅನ್ವಯ ಫೆ.28 ಬೆಳಗ್ಗ 6 ಗಂಟೆಯಿಂದ ಮಾ.2ರ ಬೆಳಗ್ಗ 6 ಗಂಟೆವರೆಗೆ ಕುರುವತ್ತಿ ಗ್ರಾಮ ಸೇರಿದಂತೆ ಸುತ್ತಮುತ್ತಲಿನ 10 ಕಿ.ಮೀ.ವ್ಯಾಪ್ತಿಯಲ್ಲಿ ಮದ್ಯಪಾನ ಮಾರಾಟ ಮತ್ತು ಸಾಗಣಿಕೆ ಮಾಡದಂತೆ ಹಾಗೂ ಮದ್ಯದ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್ ಮತ್ತು ಇತರೆ ಸ್ಥಳಗಳಲ್ಲಿ ಮಧ್ಯ ಅಂಗಡಿಗಳನ್ನು ಮುಚ್ಚುವಂತೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

### ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ: ಫೆ.28 ಪೂರ್ವಭಾವಿ ಸಭೆ

■ **ಹಂಪಿ ಟೈಮ್ಸ್ ಕೊಪ್ಪಳ**
ಜಿಲ್ಲಾ ಕೇಂದ್ರದಲ್ಲಿ ಮಾರ್ಚ್ 14 ರಂದು ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಆಚರಣೆ ಪ್ರಯುಕ್ತ ಪೂರ್ವಭಾವಿ ಸಭೆಯನ್ನು ಫೆಬ್ರವರಿ 28 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಅಪರ ಜಿಲ್ಲಾಧಿಕಾರಿ ಸಿದ್ದರಾಮೇಶ್ವರ ಅವರು ವಹಿಸಿಕೊಳ್ಳಲಿದ್ದು, ಸಭೆಗೆ ಸಂಬಂಧಿಸಿದ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಗೆ ತಪ್ಪದೇ ಹಾಜರಾಗಬೇಕು ಹಾಗೂ ಸಮಾಜದ ಮುಖಂಡರು ಈ ಸಭೆಯಲ್ಲಿ ಆಗಮಿಸಿ ಅಗತ್ಯ ಸಲಹೆಗಳನ್ನು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ ತಿಳಿಸಿದ್ದಾರೆ.

### ಪುಸ್ತಕ ಖರೀದಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**
ಕಲ್ಯಾಣ ಕರ್ನಾಟಕ ಭಾಗದ ಲೇಖಕರಿಗೆ ಉತ್ತೇಜನ ನೀಡಲು ಹಾಗೂ ಈ ಭಾಗದ ಲೇಖಕರು ಬರೆದ ಪುಸ್ತಕಗಳನ್ನು ಪರಿಚಯಿಸುವ ಪ್ರಮುಖ ಉದ್ದೇಶದ ಹಿನ್ನಲೆಯಲ್ಲಿ ಹಾಗೂ ಕಲ್ಯಾಣ ಕರ್ನಾಟಕ ಭಾಗದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿರುವ ಸಾರ್ವಜನಿಕರಿಗೆ ಓದುವ ಉತ್ತೇಜನ ನೀಡಲು ಕೆ.ಕೆ.ಆರ್.ಡಿ.ಬಿ. ಕಲಬುರಗಿ ಮ್ಯಾಕ್ರೋ ಯೋಜನೆಯಡಿ ಸ್ಥಳೀಯ ಲೇಖಕರಿಂದ 2018-19ನೇ ಸಾಲಿನ ಜನೇವರಿ-2018 ರಿಂದ 2023-24 ನೇ ಸಾಲಿನ ಡಿಸೆಂಬರ-2023 ರವರೆಗೆ ಪ್ರಥಮವಾಗಿ ಮುದ್ರಣಗೊಂಡು ಸಾಹಿತ್ಯ/ ಲಲಿತಕಲೆ/ ವಿಜ್ಞಾನ/ ಮಾನವಿಕ/ ವೈದ್ಯಕೀಯ/ ತಾಂತ್ರಿಕ/ ಸ್ಪರ್ಧಾತ್ಮಕ/ ಪರಾಮಾರ್ಶನ ಕೃತಿಗಳು ಹಾಗೂ ಮಕ್ಕಳ ಸಾಹಿತ್ಯ/ ನವಸಾಕ್ಷರರ ಕೃತಿಗಳು ಇತ್ಯಾದಿ ವಿಷಯಗಳ ಕನ್ನಡ/ ಆಂಗ್ಲ/ಇತರೆ ಭಾರತೀಯ ಭಾಷೆಯ ಗ್ರಂಥಗಳ ಆಯ್ಕೆಗೆ ಲೇಖಕರು, ಲೇಖಕ ಪ್ರಕಾಶಕರು, ಪ್ರಕಟಣಾ ಸಂಸ್ಥೆಗಳು ವಿತರಕರಿಂದ ಪುಸ್ತಕಗಳನ್ನು ಅಹ್ವಾನಿಸಿದೆ.

ಸದರಿ ಪುಸ್ತಕಗಳ ಖರೀದಿಗಾಗಿ, ಮುಖ್ಯ ಗ್ರಂಥಾಲಯಾಧಿಕಾರಿ ಕಛೇರಿಯಲ್ಲಿ ಅರ್ಜಿ ಪಡೆದು ದಿನಾಂಕ 11.03.2025 ರ ಸಂಜೆ 5 ಘಂಟೆಯ ಒಳಗಾಗಿ ಮುಖ್ಯ ಗ್ರಂಥಾಲಯಾಧಿಕಾರಿ ಕಛೇರಿ ಡಾ ಬಿ.ಆರ್ ಅಂಬೇಡ್ಕರ್ ರೀಡಿಂಗ್ ಸೆಂಟರ್ ಎನ್.ಜಿ.ಓ ಕಾಲೋನಿ ಕಿನ್ನಾಳ ರಸ್ತೆ ಕೊಪ್ಪಳ ಇಲ್ಲಿಗೆ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿ, ಕಾಪಿರೈಟಿನ ನೊಂದಣಿಯ ದೃಡೀಕರಿಸಿದ ನಕಲು ಪ್ರತಿ, ವಿತರಕರು ಸರಬರಾಜು ಹಕ್ಕನ್ನು ಪಡೆದಿದ್ದಲ್ಲಿ ಅದರ ನಕಲು ಪ್ರತಿಯನ್ನು ಈ ದಾಖಲೆಗಳನ್ನು ಕಡ್ಡಾಯವಾಗಿ ಲಗತ್ತಿಸಿ ಸಲ್ಲಿಸಲು ಮುಖ್ಯ ಗ್ರಂಥಾಲಯಾಧಿಕಾರಿ ಜಿಲ್ಲಾ ಕೇಂದ್ರ ಗ್ರಂಥಾಲಯ ಕೊಪ್ಪಳ ಇವರು ತಿಳಿಸಿದ್ದಾರೆ.

### ಫೆ.27 ರಂದು ಒಂದು ದಿನದ ಕಾರ್ಯಾಗಾರ

■ **ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ "ಮಕ್ಕಳಿಗಾಗಿ ಮಕ್ಕಳ ಸ್ನೇಹಿ ಕಾನೂನು ಸೇವೆಗಳ ಯೋಜನೆ 2024 ಮತ್ತು ಮಾನಸಿಕ ಅಸ್ವಸ್ಥಕ ಹೊಂದಿರುವ ವ್ಯಕ್ತಿ ಮತ್ತು ಬೌದ್ಧಿಕ ಅಂಗವಿಕಲತೆ ಹೊಂದಿರುವ ವ್ಯಕ್ತಿಗೆ ಕಾನೂನು ಸೇವೆಗಳ ಯೋಜನೆ 2024" ಕುರಿತು ಫೆ.27 ರಂದು ಬೆಳಿಗ್ಗೆ 10 ಗಂಟೆಗೆ ನಗರದ ತಾಳೂರು ರಸ್ತೆಯ ಹೊಸ ನ್ಯಾಯಾಲಯ ಸಂಕೀರ್ಣದಲ್ಲಿ ಒಂದು ದಿನದ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ ಅವರು ತಿಳಿಸಿದ್ದಾರೆ.

**ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಸೂಚನೆ | ಅಧಿಕಾರಿಗಳು ಮನಃಪೂರ್ವಕವಾಗಿ ಕೆಲಸ ಮಾಡಿ**

# ನಾಡಹಬ್ಬದಂತೆ ಹಂಪಿ ಉತ್ಸವ ಆಚರಣೆ



■ **ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿ ಉತ್ಸವ ನಾಡ ಹಬ್ಬವಿದ್ದಂತೆ, ಅಧಿಕಾರಿಗಳು ಮನಃಪೂರ್ವಕವಾಗಿ ತೊಡಗಿಕೊಂಡು ಕೆಲಸ ನಿರ್ವಹಿಸಬೇಕು. ಈ ಬಾರಿ ಬೇಸಿಗೆ ಮುಂಚಿತವಾಗಿ ಆರಂಭವಾಗಿದೆ. ಪ್ರಧಾನ ವೇದಿಕೆ ಸೇರಿದಂತೆ ಎಲ್ಲ ವೇದಿಕೆಗಳ ಬಳಿ ದೂಳು ಬಾರದಂತೆ ಹೆಚ್ಚಿಗೆ ನೀರು ಹಾಯಿಸಬೇಕು. ಜನರಿಗೆ ಸೂಕ್ತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ವಸತಿ, ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ. ಜೆಡ್.ಜಮೀರ್ ಅಹ್ಮದ್ ಖಾನ್ ಸೂಚಿಸಿದರು.

ಮಂಗಳವಾರ ಸಂಜೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಂಪಿ ಉತ್ಸವ-2025 ಸಿದ್ದತೆಗಳ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.ಖಾಸಗಿ ವ್ಯಕ್ತಿಗಳ ಸಹಯೋಗದಲ್ಲಿ ಅರವಟಿಗೆ, ಮಜ್ಜಿಗೆ ನೀಡಲು ವ್ಯವಸ್ಥೆ ಮಾಡಿ. ಕಳೆದ ಬಾರಿಯಂತೆ ಹಂಪಿ ಉತ್ಸವ ಜನೋತ್ಸವವಾಗಿ ಯಶಸ್ವಿಯಾಗಬೇಕು. ಈ ಬಾರಿ ಮಹಾನವಮಿ ದಿಬ್ಬ ಬಳಿ ಹೊಸದಾಗಿ ವೇದಿಕೆ ನಿರ್ಮಿಸಿ ಕಲಾವಿದರಿಗೆ ಅವಕಾಶ ನೀಡಲಾಗಿದೆ. ಕಮಲಾಪುರ ಕೆರೆಯಲ್ಲಿ ಬೋಟಿಂಗ್ ಹಾಗೂ ಕುಸ್ತಿ ನಡೆಯುವ ಸ್ಥಳದಲ್ಲಿ ಬೈಕ್ ಸಾಹಸ ಕ್ರೀಡೆಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

**ರೂ.15 ಕೋಟಿ ಅನುದಾನಕ್ಕೆ ಬೇಡಿಕೆ :**

ಹಂಪಿ ಉತ್ಸವಕ್ಕೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತಲಾ ರೂ.7 ಕೋಟಿ ಹಣವನ್ನು ಈಗಾಗಲೇ ಬಿಡುಗಡೆ ಮಾಡಲು ಒಪ್ಪಿಗೆ ನೀಡಲಾಗಿದೆ. ಕಳೆದ ಬಾರಿ ಉತ್ಸವಕ್ಕೆ ರೂ. 14 ಕೋಟಿ ಅನುದಾನ ನೀಡಲಾಗಿತ್ತು. ಈ ಬಾರಿ 15 ಕೋಟಿ ಅನುದಾನಕ್ಕೆ ಪ್ರಸ್ತಾವನೆ ನೀಡಲಾಗಿದೆ. ಪ್ರಧಾನ ವೇದಿಕೆಗೆ ಹಂಪಿ ಉತ್ಸವದ ರುವಾರಿ ಮಾಜಿ ಉಪ ಮುಖ್ಯಮಂತ್ರಿ ಎಂ.ಪಿ.ಪ್ರಕಾಶ್ ಹೆಸರು ಇಡಲಾಗಿದೆ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಉತ್ಸವದಲ್ಲಿ ಭಾಗವಹಿಸಲಿದ್ದಾರೆ. ಪ್ರತಿ ವರ್ಷವೂ ನವೆಂಬರ್ ತಿಂಗಳಿನಲ್ಲಿ ಹಂಪಿ ಉತ್ಸವ ಆಯೋಜಿಸಲು ಚಿಂತನೆ ನಡೆಸಲಾಗಿದೆ. ಉತ್ಸವಕ್ಕೆ ಎಲ್ಲಾ ಪಕ್ಷದ ನಾಯಕರನ್ನು ಸಹ ಆಹ್ವಾನಿಸಲಾಗಿದೆ. ಉತ್ಸವದಲ್ಲಿ ಯಾವುದೇ ರಾಜಕೀಯವನ್ನು ಬೆರಸುವುದಿಲ್ಲ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದರು.

ಶಾಸಕ ಹೆಚ್.ಆರ್.ಗವಿಯಪ್ಪ ಮಾತನಾಡಿ, ಹಂಪಿ ಉತ್ಸವ ಪ್ರತಿ ವರ್ಷದಂತೆ ಈ ಬಾರಿಯೂ ವಿಜೃಂಭಣೆಯಿಂದ ನಡೆಯಲಿದೆ. ಅಧಿಕಾರಿಗಳು ಸಕಲ ಸಿದ್ಧತೆ ಕೈಗೊಂಡಿದ್ದಾರೆ ಎಂದು ತಿಳಿಸಿದರು.

ಜನವರಿಯಿಂದಲೇ ಹಂಪಿ ಉತ್ಸವ ಸಿದ್ದತೆ ಕಾರ್ಯ ಆರಂಭಿಸಲಾಗಿದೆ. ಉತ್ಸವದ ಯಶಸ್ವಿಗಾಗಿ ಸಮಿತಿಗಳನ್ನು ರಚಿಸಲಾಗಿದೆ. ಪ್ರಧಾನ ವೇದಿಕೆ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಹಂಪಿ ಉತ್ಸವ ಉದ್ಘಾಟನೆ ಸಮಾರಂಭಕ್ಕೆ ಸಾರ್ವಜನಿಕರನ್ನು ಕರೆತರಲು 300 ಬಸ್ ವ್ಯವಸ್ಥೆ ಮಾಡಲಾಗಿದೆ. ಪ್ರತಿದಿನ 40 ಬಸ್‌ಗಳು ಹಂಪಿ ಉತ್ಸವಕ್ಕಾಗಿಯೇ ಕಾರ್ಯಾಚರಣೆ ನಡೆಸಲಿವೆ. 25 ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ. 10 ತಾತ್ಕಾಲಿಕ ಆಸ್ಪತ್ರೆ, 9 ಆಂಬುಲೆನ್ಸ್‌ಗಳನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ. ದೂಳು ಬಾರದ ಹಾಗೆ 5 ಲಾರಿಗಳ ಮೂಲಕ ನೀರು ಹಾಯಿಸಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸಭೆಯಲ್ಲಿ ಮಾಹಿತಿ ನೀಡಿದರು.

ಹಂಪಿ ಉತ್ಸವದ ಅಂಗವಾಗಿ ಪೊಲೀಸ್ ಇಲಾಖೆಯಿಂದ ಸಿಸಿಟಿವಿ ಅಳವಡಿಸಲಾಗಿದೆ. ಉತ್ಸವದ ಸ್ಥಳದಲ್ಲಿ ಸಹಾಯವಾಣಿ ಸಾರ್ವಜನಿಕ ಉದ್ಘೋಷ ಕೇಂದ್ರಗಳನ್ನು ತೆರೆಯಲಾಗುವುದು. ಉತ್ಸವಕ್ಕೆ ಆಗಮಿಸುವವರ ಅನುಕೂಲಕ್ಕಾಗಿ ಸೈನ್ ಬೋರ್ಡ್ ಗಳನ್ನು ಅಳವಡಿಸಲಾಗಿದೆ. ಪಾಸುಗಳನ್ನು ನೀಡಲಾಗುವುದು. ಸಂಚಾರ ದಟ್ಟಣೆ ಕಡಿಮೆ ಮಾಡುವ ನಿಟ್ಟನಲ್ಲಿ ಹಂಪಿಗೆ ಏಕಮುಖಸಂಚಾರಕ್ಕೆಅನುವುಮಾಡಿಕೊಡಲಾಗುವುದು. 100 ಎಕೆರೆ ಜಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು.ಬಿ.ಎಲ್ ತಿಳಿಸಿದರು.

ಸಭೆಯಲ್ಲಿ ಜಿ.ಪಂ.ಸಿಇಓ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಸಹಾಯಕ ಆಯುಕ್ತ ವಿವೇಕ್, ತಹಶೀಲ್ದಾರ್ ಶೃತಿ ಎಂ.ಗೌಡ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಹಂಪಿ ಉತ್ಸವ ಜನ ಜಾಗೃತಿಗಾಗಿ ಬೈಕ್ ರ್‍ಯಾಲಿ



■ **ಹಂಪಿ ಟೈಮ್ಸ್ ಹೊಸಪೇಟೆ**
ಫೆ.28 ರಂದು ಹಂಪಿ ಉತ್ಸವಕ್ಕೆ ವಿದ್ಯುಕ್ತವಾಗಿ ಚಾಲನೆ ದೊರೆಯಲಿದೆ. ಈಗಾಗಲೇ ಹೊಸಪೇಟೆ ನಗರ, ಕಮಲಾಪುರ ರಸ್ತೆಗಳು ಹಾಗೂ ಹಂಪಿ ಮದುವಣಗಿತ್ತಿಯಂತೆ ಸಿಂಗಾರಗೊಳ್ಳುತ್ತಿವೆ.
ಹೊಸಪೇಟೆ ನಗರದಿಂದ ಹಂಪಿ ಉತ್ಸವ ನಡೆಯುವ ಸ್ಥಳಗಳವರೆಗೆ ಬೆಳಕಿನ ತೋರಣ ಕಟ್ಟಲಾಗಿದೆ. ಹಂಪಿ ಸ್ಮಾರಕಗಳು ವಿಶೇಷ ಬೆಳಕಿನಲ್ಲಿ ಕಂಗೊಳಿಸುತ್ತಿವೆ. ಜನರಿಗೆ ಹಂಪಿ ಉತ್ಸವದ ಜಾಗೃತಿ ಮೂಡಿಸುವ ಸಲು ವಾಗಿ ಮಂಗಳವಾರ ನಗರದ ಜಿಲ್ಲಾಧಿಕಾರಿ ಕಚೇರಿ ಯಿಂದ ಹಂಪಿ ವಿರೂಪಾಕ್ಷ ದೇವಾಲಯದವರೆಗೆ ಬೈಕ್ ರ್‍ಯಾಲಿ ನಡೆಸಲಾಯಿತು. ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಸ್ವತಃ ರಾಯಲ್ ಎನ್ ಫೀಲ್ಡ್ ಬೈಕ್ ಏರಿ ರ್‍ಯಾಲಿಯ ನೇತೃತ್ವ ವಹಿಸಿದ್ದರು. ಸಹಾಯಕ ಆಯುಕ್ತ ವಿವೇಕ್, ತಹಶೀಲ್ದಾರ್ ಶೃತಿ ಮಾಳಪ್ಪಗೌಡ ಸಹ ಬೈಕ್ ಚಲಾಯಿಸಿ ಜಿಲ್ಲಾಧಿಕಾರಿಗಳಿಗೆ ಸಾಥ್ ನೀಡಿದರು. ಜಿಲ್ಲಾಧಿಕಾರಿ ಕಚೇರಿಯಿಂದ ಆರಂಭವಾದ ಬೈಕ್ ರ್‍ಯಾಲಿ ಸಾಯಿಬಾಬಾ ರಸ್ತೆ, ಎ.ಪಿ.ಎಂ.ಸಿ., ನೀಲಕಂಠೇಶ್ವರ ದೇವಸ್ಥಾನ, 100 ಹಾಸಿಗೆಗಳ ಆಸ್ಪತ್ರೆ, ವಿಎನ್‌ಸಿ ಕಾಲೇಜು ರಸ್ತೆ, ಅಂಬೇಡ್ಕರ್ ಸರ್ಕಲ್ , ಪುನಿತ್ ರಾಜ್‌ಕುಮಾರ್ ವೃತ್ತ, ಉಡುಪಿ ಹೊಟೆಲ್, ಹಂಪಿ ರಸ್ತೆ ಮೂಲಕ ಅನಂತಶಯನಗುಡಿ, ಕೊಂಡನಾಯಕನಹಳ್ಳಿ, ಕಡ್ಡಿರಾಂಪುರ ಮಾರ್ಗವಾಗಿ ಹಂಪಿಯ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಬಳಿ ಮುಕ್ತಾಯಗೊಂಡಿತು. ರ್‍ಯಾಲಿಯಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಪ್ರಯತ್ನ ನಿಮ್ಮನ್ನು ಎಂದೂ ಸೋಲಲು ಬಿಡುವುದಿಲ್ಲ.

YOU CAN RESERVE MEDIA SPACE FOR YOUR PROGRAM PROMOTION
Scan to Read Hampi Times Epaper
Contact for More Details
9448633038
www.hampitimes.com/epaper.hampitimes.com

# ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯೋತ್ಸವ ದಾರ್ಶನಿಕರ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕಿದೆ

**ಕೊಪ್ಪಳ ನಗರಸಭೆ ಅಧ್ಯಕ್ಷ ಅಮ್ಜದ ಪಟೇಲ್ ಹೇಳಿಕೆ | ದೇಶಕ್ಕೆ ಶಿವಾಜಿ ಕೊಡುಗೆ ಅಪಾರ**



■ **ಹಂಪಿ ಟೈಮ್ಸ್ ಕೊಪ್ಪಳ**
ಛತ್ರಪತಿ ಶಿವಾಜಿ ಮಹಾರಾಜರು ಧೈರ್ಯ, ಶೌರ್ಯದ ಜೊತೆಗೆ ಅವರೊಬ್ಬ ದಾರ್ಶನಿಕ ನಾಯಕರಾಗಿದ್ದರು ಹಾಗಾಗಿ ಅವರು ಹಾಕಿದ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕಿದೆ ಎಂದು ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ ಪಟೇಲ್ ಹೇಳಿದರು.

ಅವರು ಮಂಗಳವಾರ ಜಿಲ್ಲಾಡಳಿತ ಕೊಪ್ಪಳ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡಿದ್ದ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಶಿವಾಜಿ ಮಹಾರಾಜರು ಮಹಾರಾಷ್ಟ್ರದಲ್ಲಿ ಜನಿಸಿದರು ಅವರು ದೇಶಕ್ಕಾಗಿ ದೊಡ್ಡ ಕೊಡುಗೆ ನೀಡಿದ್ದಾರೆ. ಎಲ್ಲಾ ಸಮಾಜದ ಜನರ ಏಳ್ಗೆಯನ್ನು ಬಯಸಿದ್ದರು. ಹಲವಾರು ವಿದೇಶಿ ಆಕ್ರಮಣಕಾರರನ್ನು ಅವರು ತಮ್ಮ ಧೈರ್ಯ ಮತ್ತು ಸಾಹಸದ ಮೂಲಕ ಎದುರಿಸಿದ್ದ ಒಬ್ಬ ಶ್ರೇಷ್ಠ ನಾಯಕನಾಗಿದ್ದರು. ಭಾರತದಲ್ಲಿ ಹಲವಾರು ಧರ್ಮ ಜಾತಿ. ಜನಾಂಗಗಳಿದ್ದರು ನಾವೆಲ್ಲರೂ ಪರಸ್ಪರ ಸಹೋದರತ್ವದಿಂದ ಬಾಳುತ್ತಿದ್ದೆವೆ ಎಂದು ಹೇಳಿದರು.

ಎಲ್ಲರೂ ಆರ್ಥಿಕವಾಗಿ ಸಬಲರಾಗ ಬೇಕಾದರೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಕೊಪ್ಪಳ ನಗರ ಶಾಸಕರು ತಮ್ಮ ಸಮಾಜದ ಸಮುದಾಯ ಭವನ ಕಟ್ಟಲು ಕೆ.ಕೆ.ಆರ್.ಡಿ ಅನುದಾದಲ್ಲಿ 50 ಲಕ್ಷ ಹಣವನ್ನು ನೀಡಿದ್ದಾರೆ. ನಗರಸಭೆ ಕೊಪ್ಪಳ ವತಿಯಿಂದ ತಮ್ಮ ಯಾವುದೇ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಅನುದಾನವನ್ನು ಕೊಡುತ್ತೇನೆ. ತಮಗೆಲ್ಲರಿಗೂ ಶಿವಾಜಿ ಮಹಾರಾಜರ ಜಯಂತಿ ಶುಭಾಶಯಗಳು ಎಂದು ಹೇಳಿದರು.

ಕೊಪ್ಪಳ ತಹಶಿಲ್ದಾರ ವಿಠಲ ಚೌಗಲಾ ಮಾತನಾಡಿ, ಶಿವಾಜಿ ಮಹಾರಾಜರಲ್ಲಿ ರಾಷ್ಟ್ರ ಪ್ರೇಮ. ರಾಷ್ಟ ಭಕ್ತಿ. ಅಗಾಧವಾಗಿತ್ತು. ಅವರ ಗೋರಿಲ್ಲಾ ಯುದ್ಧ ತಂತ್ರದ ಮೂಲಕ ತಮ್ಮ ಎದುರಾಳಿ ಶತ್ರುಗಳನ್ನು ನಡುಕ ಹುಟ್ಟಿಸುತ್ತಿದ್ದರು. ಅವರು ಭಾರತದ ಭದ್ರ ಬುನಾದಿ ಹಾಕಿದ ಶ್ರೇಷ್ಠ ನಾಯಕರಾಗಿದ್ದು, ದೇಶದ ಉಳಿವಿಗಾಗಿ ಹೋರಾಟ ಮಾಡಿದ್ದರು ಎಂದು ಹೇಳಿದರು.

ಹಿರಿಯ ನ್ಯಾಯವಾದಿಗಳು ಮತ್ತು ಸಾಮಾಜಿಕ ಕಾರ್ಯಕರ್ತರಾದ ಸುಧೀರ ಘೋರ್ಪಡೆ ಗದಗ ಅವರು ಮಾತನಾಡಿ, ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮ ಸರ್ಕಾರದ ವತಿಯಿಂದ ಫೆಬ್ರವರಿ 19 ರಂದು ಎಲ್ಲಾ ಕಡೆ ಆಚರಣೆ ಮಾಡಲಾಗುತ್ತದೆ. ಆದರೆ ಕೆಲವು ಕಡೆ ಮಾತ್ರ ಒಂದು ವಾರ ವ್ಯತ್ಯಾಸ ಆಗುತ್ತವೆ. ಶಿವಾಜಿ ಹುಟ್ಟಿ ಬೆಳೆದದ್ದು. ಅವರ ಕೊಡುಗೆಗಳನ್ನು ಅನೇಕ ಭಾಷಣದಲ್ಲಿ ಕೇಳುತ್ತಾ ಬಂದಿದ್ದೆವೆ. ದೇಶ ಹಾಗೂ ಧರ್ಮಕ್ಕೆ ಹಾನಿಯಾದಾಗ ಅನೇಕ ಮಹಾನ್ ಪುರುಷರು. ದಾರ್ಶನಿಕರು. ಮೇಧಾವಿಗಳು ಹುಟ್ಟಿ ಬರುತ್ತಾರೆ ಎಂದು ಶ್ರೀ ಕೃಷ್ಣ ಹೇಳುವಂತೆ. 500 ವರ್ಷಗಳ ಪರಕೀಯ ಆಡಳಿತ ಆ ಸಂದರ್ಭದಲ್ಲಿ ಸಹ್ಯಾದ್ರಿಯ ಮಡಿಲಿನ ಸಿಂಹ, ತಾಯಿ ಜಿಜಾಮಾತೆಯ ಉದರದಲ್ಲಿ ಶಿವಾಜಿ ಮಹಾರಾಜರು ಜನಿಸುತ್ತಾರೆ. ಆ ಸಂದರ್ಭದಲ್ಲಿ ದೆಹಲಿಯಲ್ಲಿ ಸುಲ್ತಾನರು. ಬಿಜಾಪುರದಲ್ಲಿ ಆದಿಲ್ ಶಾಹಿಗಳು ಆಡಳಿತ ಮಾಡುತ್ತಿದ್ದರು. ಶಿವಾಜಿ ತಂದೆ ಶಹಾಜಿ ಬೊಂಸ್ಲೇ ಆದಿಲ್ ಶಾಹಿಗಳ ಸೇನಾಧಿಪತಿಯಾಗಿ ಕೆಲಸ ಮಾಡುವ ಪ್ರಸಂಗ ಅದಾಗಿತ್ತು ಎಂದರು.

ಶಿವಾಜಿ ತಾಯಿ ಬಾಲ್ಯದಲ್ಲಿ ರಾಮಾಯಣ ಹಾಗೂ ಮಹಾಭಾರತ ಕಥೆಗಳನ್ನು ಬಾಲಕನಿಗೆ ಹೇಳುತ್ತಿದ್ದಳು ಹಾಗಾಗಿ ಶಿವಾಜಿಗೆ 14 ವರ್ಷದಲ್ಲಿ ಸಾಮ್ರಾಜ್ಯ ಹೇಗೆ ಕಟ್ಟಬೇಕು ಎಂಬ ಆಲೋಚನೆ ಅವನಲ್ಲಿ ಮೂಡಿತು. ಹಲವಾರು ಯುವಕರನ್ನು ಸಂಘಟಿಸಿ ಹಿಂದ್ ವಿ ಸ್ವರಾಜ್ಯ ಸ್ಥಾಪನೆ ಮಾಡಿದ. ಅವರ ಹೆಸರು ತಂಜಾವೂರಿನಿಂದ ಸೂರತ್. ಬರೋಡಾ. ಗ್ವಾಲಿಯರ್. ಆಗ್ರಾ ವರೆಗೆ ಶಿವಾಜಿ ಮಹಾರಾಜರ ವಿವಿಧ ಛಾಯೆಗಳು ಕಂಡು ಬರುತ್ತವೆ. ಅವರು ಯಾವುದೇ ಜಾತಿ ಜನಾಂಗಕ್ಕೆ ಸೀಮಿತವಾದ ವ್ಯಕ್ತಿಯಲ್ಲ ಅವರ ಆದರ್ಶಗಳನ್ನು ಮಕ್ಕಳಲ್ಲಿ ಬೆಳೆಸೋಣ ಎಂದು ಹೇಳಿದರು.

ಶಿವಾಜಿ ಮಹಾರಾಜರ ವೇಷ - ಭೂಷಣ ಸ್ಪರ್ಧೆಯನ್ನು ಪುಟಾಣಿ ಮಕ್ಕಳಿಂದ ಇದೇ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿತ್ತು ಇದರಲ್ಲಿ ಪ್ರಥಮ. ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಮಕ್ಕಳಿಗೆ ಗಣ್ಯರಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದ ನಂತರ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರದ ಮೆರವಣಿಗೆ ಕೊಪ್ಪಳ ನಗರದಲ್ಲಿ ನಡೆಯಿತು.

ನಗರಸಭೆ ಉಪಾಧ್ಯಕ್ಷರಾದ ಅಶ್ವಿನಿ ಗದುಗಿನಮಠ. ಫಕೀರಪ್ಪ ಆರೇರ್. ಕೃಷ್ಣಾಜಿ ಬೋಸಲೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ್ ಮರಬನಳ್ಳಿ. ಶರಬೋಜಿ ಗಾಯಕವಾಡ. ರಾಘವೇಂದ್ರ ಹುಯಿಲಗೋಳ. ರಾಜು ಬಾಕಳೆ. ಸರೋಜಾ ಬಾಕಳೆ. ಸಾವಿತ್ರಿ ಹಾಗೂ ಮರಾಠ ಸಮಾಜದ ಕುಲಬಾಂಧವರು ಸೇರಿದಂತೆ ಇತರೆ ಹಲವಾರು ಜನರು ಉಪಸ್ಥಿತರಿದ್ದರು.

### ಶ್ರೀ ರೇಣುಕಾಚಾರ್ಯ ಜಯಂತಿ: ಫೆ.28 ರಂದು ಪೂರ್ವಭಾವಿ ಸಭೆ

■ **ಹಂಪಿ ಟೈಮ್ಸ್ ಕೊಪ್ಪಳ**
ಜಿಲ್ಲಾ ಕೇಂದ್ರದಲ್ಲಿ ಮಾರ್ಚ್ 12 ರಂದು ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆಯನ್ನು ಫೆಬ್ರವರಿ 28 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಅಪರ ಜಿಲ್ಲಾಧಿಕಾರಿ ಸಿದ್ದರಾಮೇಶ್ವರ ಅವರು ವಹಿಸಿಕೊಳ್ಳಲಿದ್ದು, ಸಭೆಗೆ ಸಂಬಂಧಿಸಿದ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಗೆ ತಪ್ಪದೇ ಹಾಜರಾಗಬೇಕು ಹಾಗೂ ಸಮಾಜದ ಮುಖಂಡರು ಈ ಸಭೆಯಲ್ಲಿ ಆಗಮಿಸಿ ಅಗತ್ಯ ಸಲಹೆಗಳನ್ನು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಫೆ.27 ರಂದು ರಾಜ್ಯ ಮಟ್ಟದ ಬುಡಕಟ್ಟು ಉತ್ಸವ ಆಯೋಜನೆಯ ಪೂರ್ವಭಾವಿ ಸಿದ್ಧತಾ ಸಭೆ

■ **ಹಂಪಿ ಟೈಮ್ಸ್ ಬಳ್ಳಾರಿ**
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2024-25 ನೇ ಸಾಲಿನ ಪರಿಶಿಷ್ಟ ಪಂಗಡ ಉಪಯೋಜನೆಯಡಿ ರಾಜ್ಯ ಮಟ್ಟದ ಬುಡಕಟ್ಟು ಉತ್ಸವವನ್ನು ಮಾ.08 ರಂದು ಬಳ್ಳಾರಿಯಲ್ಲಿ ಆಯೋಜಿಸುವ ಕುರಿತು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅಧ್ಯಕ್ಷತೆಯಲ್ಲಿ ಫೆ.27 ರಂದು ಬೆಳಿಗ್ಗೆ 11.30 ಗಂಟೆಗೆ ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶನ ಬಿ.ನಾಗರಾಜ ಅವರು ತಿಳಿಸಿದ್ದಾರೆ.